ನಮ್ಮ ಮಾನಸ

ಸಂಪುಟ : 2 ಅಕ್ಟೋಬರ್ 2008 ಸಂಚಿಕೆ : 6



ನಮ್ಮ ಮಾನಸ

ಅಕ್ಟೋಬರ್ 2008

ಸಂಪುಟ : 2 ಸಂಚಿಕೆ : 6

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road,
Raghavanagara
New Timberyard Layout
Bangalore - 560 026.
✆ : 26757159

ಪರಿವಿಡಿ

•

ಚಂದಾ ವಿವರ

ಬಿಡಿಪ್ರತಿ	8–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ಓದುಗರ ಗಮನಕ್ಕೆ

ಓದುಗರೆಲ್ಲರ ಸಹಕಾರ ಹಾಗೂ ಪ್ರೋತ್ಸಾಹದಿಂದ 'ನಮ್ಮ ಮಾನಸ'ದ ಪ್ರಕಟಣೆ ಸಾಧ್ಯವಾಗಿದೆ. ಪತ್ರಿಕೆಗೆ ಓದುಗರ ಚಂದಾ ಹಣವೇ ಜೀವಾಳ. ಚಂದಾಹಣ ಕಳುಹಿಸಿ ಮತ್ತು ಚಂದಾ ನವೀಕರಿಸಬೇಕಾದವರು ನವೀಕರಿಸಿ ಪತ್ರಿಕೆಯನ್ನು ಆರ್ಥಿಕವಾಗಿ ಸದೃಢಗೊಳಿಸಬೇಕೆಂದು ವಿನಮ್ರವಾಗಿ ಕೋರುತ್ತೇವೆ.

ವಾರ್ಷಿಕ ಚಂದಾ – ರೂ. 100/–

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ
ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ, ವಿಜಯನಗರ
ಮೈಸೂರು – *570 017*

ಸಂಪಾದಕೀಯ

ಹೊಣೆಗಾರಿಕೆಯಿದೆಯೆ ಈ ಸರ್ಕಾರಕ್ಕೆ ?

ಈ ದೇಶದ ರಾಜಕೀಯ ಅಧೋಗತಿಗೆ ಇಳಿಯುತ್ತಿದೆಯೆಂಬ ನೋವಿನ ಸಂಗತಿ ಒಂದು ಕಡೆಯಾದರೆ, ಇನ್ನೊಂದು ಕಡೆ ಕೆಟ್ಟ ರಾಜಕೀಯ ಅಜೆಂಡಾಗಳಿಗೆ ಜನಸಾಮಾನ್ಯರು ಬೆಲೆ ತೆರಬೇಕಾಗಿದೆಯೆಂಬುದು ಅತ್ಯಂತ ವಿಷಾದಕರ ಸಂಗತಿಯಾಗಿದೆ. ಯಾವ ಸರ್ಕಾರ ಅಸ್ತಿತ್ವದಲ್ಲಿದೆ ಎಂಬ ಹಿನ್ನೆಲೆಯಲ್ಲಿ ಎಂತಹ ರಾಜಕೀಯ ಸಮಸ್ಯೆಗಳು ಉಲ್ಬಣವಾಗುತ್ತವೆ ಎಂಬುದರ ನಾಡಿಯನ್ನು ಜನಸಾಮಾನ್ಯರು ಈಗಾಗಲೇ ಗ್ರಹಿಸಬಲ್ಲವರಾಗಿದ್ದಾರೆ. ಆದರೆ ಮಂಗಳೂರಿನಲ್ಲಿ ನಡೆಯುತ್ತಿರುವ ರಾಜಕೀಯ ದಿನನಿತ್ಯದ ಖಾಸಗಿ ಬದುಕನ್ನು ಅಲುಗಾಡಿಸುತ್ತಿರುವುದು ಹಾಗೂ ಇಂತಹ ಪ್ರಕ್ರಿಯೆ ಇತರ ಕಡೆಗಳಲ್ಲೂ ಹಬ್ಬುತ್ತಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ.

ಮತಾಂತರದ ಸಮಸ್ಯೆಯನ್ನು ನೆಪ ಮಾಡಿಕೊಂಡು ದಕ್ಷಿಣ ಕನ್ನಡದ ಹನ್ನೊಂದಕ್ಕಿಂತ ಹೆಚ್ಚು ಚರ್ಚುಗಳ ಮೇಲೆ ಹಿಂದೂತ್ವ ಪರ ಸಂಘಟನೆಗಳು ದಾಳಿ ನಡೆಸುತ್ತಿರುವ ಸಂದರ್ಭದಲ್ಲಿಯೇ ಮಂಗಳೂರಿನಲ್ಲಿ ಪ್ರತಿಯೊಬ್ಬರ ಖಾಸಗಿ ಬದುಕನ್ನು ನೈತಿಕತೆಯ ಹಿನ್ನೆಲೆಯಲ್ಲಿ ಶೋಧಿಸುವ, ರಾಜಕೀಯವಾಗಿಸುವ ಹುನ್ನಾರಗಳು ನಡೆಯುತ್ತಿವೆ. ನೈತಿಕತೆಯನ್ನು ಕಣ್ಣಿಟ್ಟು ಕಾಯಲು ಸ್ವಯಂ ನೇಮಕಗೊಂಡಿರುವ ಗುಂಪುಗಳು ಜನರ ಬದುಕನ್ನು ಅಸಹನೀಯಗೊಳಿಸುತ್ತಿವೆ. ವಿಶೇಷವಾಗಿ ಯುವಕ–ಯುವತಿಯರನ್ನು ಗುರಿ ಮಾಡಿಕೊಂಡಿರುವ ಹಿಂದುತ್ವವಾದಿ ಗುಂಪುಗಳು ಸ್ನೇಹ ಸಂಬಂಧಗಳ ಮೇಲೂ ದಾಳಿ ನಡೆಸಿ ರಾಜಕೀಯವಾಗಿಸುತ್ತಿರುವುದು ಅತ್ಯಂತ ದುರಂತದ ಸಂಗತಿಯಾಗಿದೆ. ಪಿತೃಪ್ರಾಧಾನ್ಯದ ಜೊತೆಗೆ ಮೂಲಭೂತವಾದ ನಡೆಸುವ ಹುನ್ನಾರದಲ್ಲಿ ಡ್ರೆಸ್‌ಕೋಡ್ ಮೇಲೆ ಹೆಚ್ಚು ಒತ್ತು ಹಾಕಿ ಹೆಂಗಸರ ಉಡುಗೆ–ತೊಡುಗೆಯನ್ನೂ ನಿಯಂತ್ರಿಸಲಾಗುತ್ತಿದೆ. ಸಂಸ್ಕೃತಿಯಲ್ಲಿ ಅವರ ಪಾತ್ರವೇನು ಎಂದು ಅವರಿಗೆ ಬೋಧಿಸಲಾಗುತ್ತಿದೆ. ಅವರು ಯಾರ ಜೊತೆ ಹೋಗಬೇಕು, ಹೋಗಬಾರದು ಎಂಬುದನ್ನು ಕೂಡಾ ನಿಯಂತ್ರಿಸಲಾಗುತ್ತಿದೆ.

ಕಾಲ್‌ಸೆಂಟರ್‌ನಲ್ಲಿ ಕೆಲಸ ಮಾಡುವ ಹುಡುಗಿ ಇತರ ಸಮುದಾಯದ ಹುಡುಗರೊಂದಿಗೆ ಹೊಟೇಲ್‌ನಲ್ಲಿ ಮಾತನಾಡುತ್ತಾ ಕುಳಿತದ್ದಕ್ಕೆ ಹಿಂದುತ್ವ ಗುಂಪಿನ ದಾಳಿಗೆ ಒಳಗಾಗಿ ಐದು ನಿಮಿಷದಲ್ಲಿ ಜೀವಂತ ಶವವಾಗಿದ್ದಳು ! ಪರಧರ್ಮದ ಸ್ನೇಹಿತೆಯನ್ನು ಹೊಂದಿದ್ದಕ್ಕಾಗಿ ಆಯಿಶಾ ಎಂಬ ತರುಣಿ ದಾಳಿಗೆ ತುತ್ತಾಗಿ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದಳು. ಬಸ್ಸಿನಲ್ಲಿ ಒಟ್ಟಿಗೇ ಪ್ರಯಾಣಿಸುತ್ತಿದ್ದ ದೀಪಾ, ಅಬ್ದುಲ್‌ವಹೀದ್ ಎಂಬುವರನ್ನು ಬಸ್ಸಿನಿಂದ ಹೊರಗೆ ಎಳೆದು ದಾಳಿ ಮಾಡಲಾಯಿತು. ತರಗತಿಯ ಗೆಳೆಯರಾದ ಸುನಿಲ್, ಅಬ್ದುಲ್, ಜೂಲಿಯ, ರಾಬರ್ಟ್, ವಹೀದ್ ಸಾರ್ವಜನಿಕ ಸ್ಥಳದಲ್ಲಿ ನಗುತ್ತ, ಮಾತನಾಡುತ್ತಾ ನಿಂತುದಕ್ಕಾಗಿ ಅವರನ್ನು ಅಪಮಾನಗೊಳಿಸಲಾಯಿತು. ಆಫ್‌ಶಾನ್ ಎಂಬ ಹುಡುಗಿಗೆ ದಿನೇಶ್ ಔಷಧಿ ತಂದುಕೊಟ್ಟ ಎಂಬ ಕಾರಣಕ್ಕೆ ಅವರಿಬ್ಬರೂ ದಾಳಿಗೆ ಒಳಗಾದರು. ಹಿಂದೂ ಹುಡುಗಿಯರ ಸ್ಕೂಲ್‌ಬ್ಯಾಗ್ ಹಿಡಿದುಕೊಂಡದ್ದಕ್ಕಾಗಿ ಸಯ್ಯದ್, ಜುಲ್‌ಫಿಕಾರ್, ಅಮೀನ್ ಅವರನ್ನು ದಾಳಿಗೆ ಗುರಿಮಾಡಲಾಯಿತು. ಉಜ್ಮಾ, ಶಾಹಿನ್ ಎಂಬುವರನ್ನು ತನ್ನ ಆಟೋರಿಕ್ಷಾದಲ್ಲಿ ಕೂರಿಸಿ ಕರೆದುಕೊಂಡು ಹೋಗಿದ್ದಕ್ಕಾಗಿ ಆಟೋರಿಕ್ಷ ಚಾಲಕ ಗೋವಿಂದ್‌ನ ಮೇಲೆ ದಾಳಿ ಮಾಡಲಾಯಿತು. ರೆಹಮಾನ್ ಎಂಬಾತ ಉಮಾ, ಭವ್ಯಾರ ಜೊತೆ ಸಾರ್ವಜನಿಕವಾಗಿ ಮಾತನಾಡಿದುದಕ್ಕೆ ದಾಳಿಗೆ ಒಳಗಾಗಬೇಕಾಯಿತು. ಹೀಗೆ ಸೆಪ್ಟೆಂಬರ್ 1ರಿಂದ ಜುಲೈ ಕೊನೆಯವರೆಗೆ 200 ಜನರ ಮೇಲೆ ಹಿಂದುತ್ವ ಗುಂಪುಗಳು ದಾಳಿ ನಡೆಸಿವೆ. 'ಹೀಗೆ ಅವಮಾನಗೊಳಿಸುವುದರಿಂದ ಯುವತಿಯರು ಹೆದರುತ್ತಾರೆ, ಮಣಿಯುತ್ತಾರೆ, ಅವರನ್ನು ಸುಧಾರಿಸಬಹುದಾಗಿದೆ, ಆದರೆ ಹುಡುಗರು ಸ್ವಲ್ಪ ಒರಟಾಗಿರುತ್ತಾರೆ' ಎಂದು ಹಿಂದುತ್ವವಾದಿ ಗುಂಪುಗಳ ಮುಖಂಡರು ನುಡಿಯುತ್ತಾರೆ. ಮನುಷ್ಯ ಸಹಜವಾದ ಕ್ರಿಯೆಗಳನ್ನೆಲ್ಲ ಕಣ್ಣಲ್ಲಿ ಕಣ್ಣಿಟ್ಟು ನೋಡಿ ನಿರೀಕ್ಷಿಸುವ ಈ ನೈತಿಕತೆಯ ಪೊಲೀಸಿಂಗ್‌ಗೆ ಯಾರೂ ಕೂಡಾ ಯಾರ ಒಪ್ಪಿಗೆಯನ್ನೂ ಪಡೆಯಬೇಕಾಗಿಲ್ಲ ಎಂಬಂತೆ 'ಸ್ವಯಂ'–ನೇಮಕಗೊಂಡಿರುವ ಈ ಸಂಸ್ಕೃತಿರ(ಭ)ಕ್ಷಕರು ವರ್ತಿಸುತ್ತಿದ್ದಾರೆ. ಸಾರ್ವಜನಿಕವಾಗಿ ಚರ್ಚುಗಳ ಮೇಲೆ ದಾಳಿ ನಡೆಯುತ್ತಿರುವಾಗಲೇ, ಖಾಸಗಿ ಬದುಕುಗಳ ಮೇಲೂ ದಾಳಿ ನಡೆಸುತ್ತಿರುವ ಸಾಂಸ್ಕೃತಿಕ ವಕ್ತಾರರ ಗೂಂಡಾಗಿರಿಗೆ ಪೊಲೀಸರು ಕೂಡಾ ಯಾವುದೇ ರೀತಿಯ ಕಠಿಣ ಕ್ರಮ ಕೈಗೊಳ್ಳದೇ ಇರುವುದು ಸರ್ಕಾರ ಅಪರೋಕ್ಷವಾಗಿ ಇದನ್ನೆಲ್ಲ ಪ್ರೋತ್ಸಾಹಿಸುತ್ತಿದೆ ಎಂಬ ಗುಮಾನಿಗೆ ಕಾರಣವಾಗಿದೆ.

ಭಿನ್ನ ಸಮುದಾಯದ ಸ್ನೇಹಿತರಿಗೆ, ಪ್ರಿಯಕರರಿಗೆ, ದಂಪತಿಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕುವುದು. ಪೊಲೀಸ್ ಠಾಣೆಗೆ ಕರೆದೊಯ್ದು immoral ಟ್ರ್ಯಾಫಿಕಿಂಗ್ ಅಥವಾ ಸೆಕ್ಷನ್ 92(0) ಕರ್ನಾಟಕ ಪೊಲೀಸ್ ಆ್ಯಕ್ಟ್ 1963 ಅಡಿಯಲ್ಲಿ ದಾಖಲು ಮಾಡುವಂತಹ ಕೆಲಸಗಳನ್ನು ಹಿಂದುತ್ವವಾದಿ ಗುಂಪುಗಳು ಮಾಡುತ್ತಿವೆ. ಇಂತಹ ದಾಖಲಾದ ಪ್ರಕರಣಗಳಲ್ಲಿ ಕ್ಷುಲ್ಲಕ (Petty) ಪ್ರಕರಣಗಳೆಂದು ಪರಿಗಣಿಸಿ ಒಂದಷ್ಟು ದಂಡ ಇಸಿದುಕೊಂಡು, ಎಚ್ಚರಿಕೆ ನೀಡಿ ಪೊಲೀಸರು ಬಿಡುತ್ತಾರಾದರೂ,

ಪೊಲೀಸರು ನಿಜವಾಗಿ ದಂಡಿಸಬೇಕಾದುದು ಯಾರನ್ನು ಎಂಬ ಪ್ರಶ್ನೆ ಎದುರಾಗುತ್ತದೆ. ದಾಳಿ ನಡೆಸುವ ಸಮಯದಲ್ಲಿ ಎದುರಿಗಿರುವ ಪೊಲೀಸರು ನಿಷ್ಕ್ರಿಯವಾಗಿ ವರ್ತಿಸಿರುವುದಕ್ಕೆ ಅಪರಾಧಿಗಳೆನಿಸಿಕೊಂಡವರಿಂದ ಈಗಾಗಲೇ ವಿರೋಧ ವ್ಯಕ್ತವಾಗಿದೆ. ಕಾನೂನಿನ ಪ್ರಕಾರ ದಾಳಿ ನಡೆಸಿದವರು ಶಿಕ್ಷೆಗೆ ಒಳಗಾಗಬೇಕು. ಆದರೆ, ಕೆಲವು ಕಡೆ ಪೊಲೀಸ್ ಅಧಿಕಾರಿಗಳು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಹಿಂದುತ್ವವಾದಿ ಕಾರ್ಯಕರ್ತರು ಅಪರಾಧಿಗಳೆಂದು ಪ್ರಕರಣ ದಾಖಲಿಸುವವರ ವಿರುದ್ಧ ತಾವು ಕ್ರಮ ಜರುಗಿಸದಿದ್ದರೆ ಕೋಮು ಘರ್ಷಣೆ ಆಗಬಹುದು ಎಂಬ ಕಾರಣಕ್ಕೆ ಕ್ಷುಲ್ಲಕ (Petty) ಅಪರಾಧಗಳೆಂದು ದಾಖಲಿಸಿ ಬಿಡಲಾಗುತ್ತದೆ ಎಂದು ಪೊಲೀಸ್ ಅಧಿಕಾರಿಗಳೇ ನುಡಿಯುತ್ತಾರೆ.

ಯಾವ ಧರ್ಮದ ಮೂಲ ಕೂಡಾ ಮನುಷ್ಯರ ಬಗೆಗೆ ಅಸಹನೆ ವ್ಯಕ್ತಪಡಿಸುವುದಿಲ್ಲ. ದೇವಸ್ಥಾನಗಳನ್ನು ನಾಶಮಾಡಿ ಎನ್ನುವುದಿಲ್ಲ. ಆದರೆ ಚುನಾಯಿತರಾಗಿ ಬಂದ ಮೇಲೆ ಸರ್ಕಾರ ತಮ್ಮದು, ಏನು ಮಾಡಿದರೂ ನಡೆಯುತ್ತದೆ ಎನ್ನುವ ಭಾವನೆ ಕೆಲವರಿಗಿದೆ. ಸರ್ಕಾರ ಜನತೆಯದು, ಯಾವುದೇ ಒಂದು ಮತಕ್ಕೆ ಮೀಸಲಲ್ಲ ಎಂಬ ಪ್ರಾಥಮಿಕ ಪರಿಜ್ಞಾನವೂ ಇಲ್ಲದವರ ಗೂಂಡಾಗಿರಿಯನ್ನು ಪ್ರತಿಯೊಬ್ಬ ನಾಗರಿಕರೂ ಖಂಡಿಸಬೇಕಾಗುತ್ತದೆ.

ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಉಡುಪಿ, ಮಂಗಳೂರು, ಶಿವಮೊಗ್ಗ, ದಾವಣಗೆರೆ, ಹಾವೇರಿ ಇಂತಹ ಕಡೆಗಳಲ್ಲಿ ನಡೆಯುತ್ತಿರುವ ಚರ್ಚ್ ಮೇಲಿನ ದಾಳಿಗಳನ್ನು ವಿರೋಧಿಸಿ ಶಾಸಕರ ಭವನದ ಸಭಾಂಗಣದಲ್ಲಿ ಕೆಲವು ಶಾಸಕರು ಒಂದು ಸಭೆಯನ್ನು ನಡೆಸಲು ತೀರ್ಮಾನಿಸಿದ್ದರು. 'ಮಾನವ ಹಕ್ಕುಗಳ ಉಲ್ಲಂಘನೆ, ಅಲ್ಪ ಸಂಖ್ಯಾತರ ಆಯೋಗದ ಪಾತ್ರ' ಎಂಬ ವಿಚಾರ ಸಂಕಿರಣವನ್ನು ಶಾಸಕಾಂಗ ಭವನದ ಸಭಾಂಗಣದಲ್ಲಿ ನಡೆಸಲು ಸಭಾಂಗಣವನ್ನು ಕಾದಿರಿಸಲಾಗಿತ್ತು. ಆದರೆ ಸೆಪ್ಟೆಂಬರ್ 15ರಂದು ಆ ಸಭಾಂಗಣವನ್ನು ಅವರಿಗೆ ಕೊಡಲೇ ಇಲ್ಲ. ಬೀಗದ ಕೈ ಇಲ್ಲ ಎಂದೂ, ಸಭಾಂಗಣವನ್ನು ಕಾಯ್ದಿರಿಸಲಾಗಿಲ್ಲ ಎಂದೂ ಸಬೂಬುಗಳನ್ನು ಅಲ್ಲಿನ ಅಧಿಕಾರಿಗಳು ಶಾಸಕರಿಗೆ ತಿಳಿಸಿದರು. ಲೆಡ್ಜರ್ ಪುಸ್ತಕದಲ್ಲಿ ಸೆಪ್ಟೆಂಬರ್ 15ನೇ ದಿನಾಂಕದ ಹಾಳೆಯನ್ನೇ ಹರಿದು ಹಾಕಲಾಗಿತ್ತು. ಇಷ್ಟು ನೇರವಾಗಿ, ವ್ಯವಸ್ಥಿತವಾಗಿ ಹಿಂದುತ್ವ ಪರವಾದ ಸಂಘಟನೆಗಳಿಗೆ ನೆರವು ನೀಡುತ್ತಿರುವ ಕರ್ನಾಟಕ ಸರ್ಕಾರ ಚರ್ಚ್‌ಗಳ ಮೇಲೆ ನಡೆಯುತ್ತಿರುವ ದಾಳಿಗಳಿಗೆ, ಖಾಸಗಿ ಬದುಕುಗಳ ಮೇಲೆ ನಡೆಯುತ್ತಿರುವ ಹಿಂಸೆಗೆ ನೇರವಾದ ಹೊಣೆ ಹೊರಬೇಕಾಗುತ್ತದೆ. ಸರ್ಕಾರದ ಬೆಂಬಲವಿರುವ ಹಿನ್ನೆಲೆಯಲ್ಲಿಯೇ ಇಂದು ಶಿಕ್ಷಿಸಲ್ಪಡಬೇಕಾದವರೆಲ್ಲಾ ಬೀದಿಯಲ್ಲಿ ರಾಜಾರೋಷವಾಗಿ ಓಡಾಡುತ್ತಾ ತಮ್ಮ ಹಿಂಸಾಪ್ರವೃತ್ತಿ, ಗೂಂಡಾಗಿರಿಯನ್ನು ಹೆಮ್ಮೆಯಿಂದ ವರ್ಣಿಸುತ್ತಾ, ಅದನ್ನೇ ಮುಂದುವರಿಸುತ್ತಿದ್ದಾರೆ.

ದಾವಣಗೆರೆಯಲ್ಲಿ ನಡೆದ ಚರ್ಚ್ ಮೇಲಿನ ದಾಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಈಗಾಗಲೇ ನೋಟೀಸ್ ಕಳಿಸಲಾಗಿದೆ ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಸ್.ಆರ್. ನಾಯಕ್ ತಿಳಿಸಿದ್ದಾರೆ. ಖಾಸಗಿ ಬದುಕುಗಳ ಮೇಲೆ ನಡೆಯುತ್ತಿರುವ ದಾಳಿ Violation of the spirit of democracy ಎಂದು ಈಗಾಗಲೇ ವಿರೋಧಗಳು ವ್ಯಕ್ತವಾಗಿವೆ. ತಮಗೆ ಬೇಕಾದ ರೀತಿಯಲ್ಲಿ ವ್ಯಾಖ್ಯಾನಿಸಬಲ್ಲ 92(0) ಸೆಕ್ಷನ್‌ಅನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದೂ ವಿರೋಧ ವ್ಯಕ್ತಪಡಿಸಲಾಗಿದೆ.

ಚರ್ಚ್‌ಗಳ ಮೇಲೆ ನಡೆಯುತ್ತಿರುವ ದಾಳಿಗೆ ಮತ್ತು ವೈಯಕ್ತಿಕ ಹಾಗೂ ಖಾಸಗಿ ಬದುಕುಗಳ ಮೇಲೆ ನಡೆಯುತ್ತಿರುವ ಹಿಂಸೆ, ಅಪಮಾನಗಳಿಗೆ ನೈತಿಕ ಹೊಣೆ ಹೊರಬೇಕಾದ ಸರ್ಕಾರ ತಕ್ಷಣವೇ ಕಠಿಣವಾದ ಕ್ರಮ ಕೈಗೊಳ್ಳಬೇಕು. ದಾಳಿಕೋರರನ್ನು ಶಿಕ್ಷಿಸಬೇಕು. ಅವರ ಗೂಂಡಾಗಿರಿಗೆ ಇತಿಶ್ರೀ ಹಾಡಬೇಕು. ಇಲ್ಲದಿದ್ದರೆ ಸರ್ಕಾರ ಗಂಭೀರವಾದ ಪರಿಣಾಮವನ್ನು ಎದುರಿಸಬೇಕಾಗುತ್ತದೆ, ಬಹುದೊಡ್ಡ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ನಾಗರಿಕರೇ ಸರ್ಕಾರಕ್ಕೆ ಕಲಿಸಬೇಕಾಗಿದೆ!

* * *

ಇತ್ತೀಚೆಗೆ ಬಾರ್‌ಗಳಲ್ಲಿ ಮಾನಿನಿಯರಿಗೆ ದುಡಿಯುವ ಅವಕಾಶಕ್ಕೆ ಅನುಮತಿ ನೀಡಿದ ನ್ಯಾಯಾಲಯದ ತೀರ್ಪು ಹೊರಬಿದ್ದಿತು. ಇದಕ್ಕಾಗಿ ಹಿಗ್ಗಿಹೋದ ಬಾರ್ ಮಾಲೀಕರು ಅಧಿಕ ಲಾಭದ ಕಲ್ಪನೆಯಲ್ಲಿ ಸಿಹಿ ಹಂಚಿದ್ದೂ ಕಂಡೆವು. ಯಾವುದೂ ನಿಷೇಧ, ಯಾವುದಕ್ಕೋ ಅನುಮತಿ, ಯಾರಿಗೊ ಹಿಗ್ಗು ಅನೇಕ ವೈರುಧ್ಯಗಳ ಸರಮಾಲೆಯೇ ಕಣ್ಣೆದುರಿಗಿದೆ. ಬದುಕುವ ಹಕ್ಕಿನ ಹಾಗೇ ಉದ್ಯೋಗದ ಆಯ್ಕೆಯೂ ಅವಳ ಹಕ್ಕು. ಇದನ್ನು ವಿರೋಧಿಸುವುದೆಂದಲ್ಲ. ಆದರೆ ಇಲ್ಲಿರುವ ಸಂಭಾವ್ಯತೆ ಮಾತ್ರ ಪ್ರಶ್ನಾರ್ಹ. ಈಗಾಗಲೇ ಜೆಸ್ಸಿಕಾ ಲಾಲ್ ಪ್ರಕರಣ ನಮ್ಮೆದುರಿಗಿದೆ. ಗುಟ್ಟು ಹೊರಹಾಕದೆ ಹಿಂಸೆ ನುಂಗಿದವರು, ಸಾವಿಗೆ ಶರಣಾದವರು ಹಲವರು. ಹೀಗಿರುವಾಗ ಮಹಿಳೆಗೆ ಈ ಉದ್ಯೋಗದ ಆಯ್ಕೆ ಅನಿವಾರ್ಯವೆ? ಹೆಣ್ಣುಮಕ್ಕಳು ಬಾರ್‌ಗಳ ಮುಂದೆ ಓಡಾಡುವುದು ಸಹ ಕಷ್ಟವಾಗಿರುವ ಈ ದಿನಗಳಲ್ಲಿ ಕುಡುಕರ ಮಧ್ಯೆ, ಮಾಲೀಕನ ಆಣತಿಯಂತೆ 'ಅಲಂಕರಿಸಿ'ಕೊಂಡು 'ಸೇವೆ' ಮಾಡುವ ಹುಡುಗಿಯರ ಪಾಡೇನಾದೀತು? ಇಂಥ ಕಡೆ ಕೆಲಸ ಮಾಡುವ ಹೆಣ್ಣುಮಕ್ಕಳಿಗೆ ದುಡಿಯುವ ಸ್ಥಳದಲ್ಲಿ ಮತ್ತು ತಡರಾತ್ರಿ ಮನೆ ತಲುಪಲು ಯಾವ ಭದ್ರತೆ ಇದೆ? ನ್ಯಾಯಾಲಯ ಸಾಂವಿಧಾನಿಕ ಹಕ್ಕುಗಳನ್ನಷ್ಟೇ ಗಮನಿಸುತ್ತದೆ. ಪ್ರಾಕ್ಟಿಕಲ್ ಆಗಿ ನಡೆಯುವುದೇ ಬೇರೆ. ಮುಖ್ಯವಾಗಿ ಅವಳ ರಕ್ಷಣೆಯ ಹೊಣೆ ಮಾಲೀಕ ಹೊರಬೇಕೆಂಬ ಕಟ್ಟುನಿಟ್ಟಾದ ನಿಯಮ ಬರಬೇಕು. ಅನಂತರ ದುಡಿಯಲು ಅನುಮತಿ. ಆದರೆ ಎಲ್ಲ ಸರಿಯಾಗಿಲ್ಲ ಅನ್ನಿಸುತ್ತದೆ.

* * *

ಈ ಸಾಲಿನ ಕಾವ್ಯಾನಂದ ಪ್ರಶಸ್ತಿಯನ್ನು 'ಅಕ್ಕಮಹಾದೇವಿಯ ದ್ವೈತ' ಕೃತಿ ಪಡೆದುಕೊಂಡಿದೆ. ಕೃತಿಕರ್ತೃ ವೀಣಾ ಬನ್ನಂಜೆ ಅವರನ್ನು 'ನಮ್ಮ ಮಾನಸ' ಅಭಿನಂದಿಸುತ್ತದೆ.

❑

ನಿಜದ ಮರೆಯಲ್ಲಿ ನರಳುತ್ತಲೇ ನಗುವ ಗ್ರಾಮೀಣ ಮಹಿಳೆಯರೊಂದಿಗೆ....

• *ರಾಜೇಶ್ವರಿ ಎಚ್.ಎಸ್.*

ತರಬೇತಿಗಾಗಿ ಹೊರಟ ಹೆಣ್ಣುಮಕ್ಕಳು ಎಂಟು ದಿನದಿಂದಲೇ ಮನೆಯಲ್ಲಿ ಹೊರಡುವ ತಯಾರಿಯನ್ನು ನಡೆಸಿದ್ದರು. ಬಹುಪಾಲು ಹೆಣ್ಣುಮಕ್ಕಳು 18ರಿಂದ 25ರ ಆಜುಬಾಜಿನವರು. ಎಲ್ಲರಿಗೂ ಚಿಕ್ಕ ವಯಸ್ಸಿನ, ಶಾಲೆಗೆ ಹೋಗುವ ಮಕ್ಕಳಿದ್ದರು. ಎಳೆಯ ಮಕ್ಕಳಿರುವವರು ತವರು ಮನೆಯಲ್ಲಿ ಬಿಟ್ಟು ಬಂದಿದ್ದರು. ಕೆಲವರು ಮಕ್ಕಳನ್ನು ನೋಡಿಕೊಳ್ಳಲು ತಾಯಿಯನ್ನು ಕರೆತಂದು ಆಕೆಯ ಬಳಿ ಬಿಟ್ಟು ಬಂದಿದ್ದರು. ಅತ್ತೆ, ಗಂಡನ ಸುಪರ್ದಿಗೆ ಮಕ್ಕಳನ್ನು ಬಿಟ್ಟು ಬಂದವರಿದ್ದರು. ಹೊರಡುವವರೆಗೆ ಏನನ್ನೊ ನೆನಪು ಮಾಡಿಕೊಳ್ಳುತ್ತಲೇ ಹೊರಟಿದ್ದರು. ಮದುವೆಗಳಿರಲಿ, ತವರು ಮನೆಗೆಂದೂ ಈ ಹೆಣ್ಣುಮಕ್ಕಳು ಹೊರಗೆ ಹೋಗಿದ್ದೇ ಇಲ್ಲವೆನ್ನಬಹುದು. ಕೌಟುಂಬಿಕ ಸಂಗತಿಗಳಿಂದ ಹೊರತಾದ ಕಾರಣಕ್ಕೆ, ಅಥವಾ ತರಬೇತಿಗೆಂದು ಹೀಗೆ ಮನೆಯಿಂದ ಹೊರ ಹೋಗಬಹುದೆಂದು ಅವರು ಕನಸು ಮನಸಿನಲ್ಲೂ ಎಣಿಸಿರಲಿಲ್ಲ.

ಸ್ವಸಹಾಯ ಗುಂಪಿನ ತರಬೇತಿಯೊಂದರಲ್ಲಿ ಭಾಗವಹಿಸಿದ್ದ ಈ ಮೂವತ್ತಾರು ಹೆಣ್ಣುಮಕ್ಕಳು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಾದ ರಾಮನಗರ, ಚನ್ನಪಟ್ಟಣ, ಕನಕಪುರ ಹಾಗೂ ಮಾಗಡಿ ತಾ॥ ಹಳ್ಳಿಗಳಿಂದ ಬಂದವರು. ಅಪರಿಚಿತರಾದ ಇವರು ಭೇಟಿಯಾದ ಕ್ಷಣಾರ್ಧದಲ್ಲಿ ಪರಿಚಯಸ್ಥರಾಗಿದ್ದರು. ಬೆಳಗ್ಗೆಯೇ ಮನೆಬಿಟ್ಟು ಮೆಜೆಸ್ಟಿಕ್ ತಲುಪಿ, ಎಲ್ಲರೂ ಬರುವವರೆಗೆ ಕಾದು, ಬಸ್ಸುಗಳನ್ನು ಬದಲಾಯಿಸುತ್ತಾ, ಸುಸ್ತಾಗಿ, ಬಸವಳಿದಿದ್ದರು, ಕೊನೆಯ ಬಸ್ಸಿನಲ್ಲಿ ಒಬ್ಬರ ಭುಜಗಳ ಮೇಲೆ ಒಬ್ಬರು ಒರಗಿ ನಿರಾತಂಕ ನಿದ್ದೆಗೆ ಜಾರಿದ್ದರು.

ಹೊಸೂರಿನ ಬಳಿಯಿರುವ ಅಚ್ಚಟ್ಟಿಪಳ್ಳಿಯಲ್ಲಿರುವ ತರಬೇತಿ ಸಂಸ್ಥೆಯನ್ನು ತಲುಪಿದೆವು. ಬಿಸಿ ಬಿಸಿಯಾದ ಟೀ ಹೊಟ್ಟೆಗಿಳಿದಾಗ ಆಯಾಸವೆಲ್ಲ ಮಂಜುಗೆಡ್ಡೆಯಂತೆ ಕರಗಿ ಮಾತಿನ ಭೋರ್ಗರೆತ ಆ ನಿರ್ಜನ ಪ್ರದೇಶದ ಏಕಾಂತ ಮೌನದ ಹೊಟ್ಟೆಯನ್ನೇ ಬಗೆದಂತಿತ್ತು.

ಕಮಲ ತನ್ನ ಒಂದು ವರ್ಷದ ಮಗುವನ್ನು ಮನೆಯಲ್ಲಿ ಬಿಟ್ಟು ಬಂದಿದ್ದಳು. ಎದೆಯಲ್ಲಿ ಹಾಲುತುಂಬಿ ಎದೆ ಕಟ್ಟಿಕೊಂಡಿತ್ತು. ನೋವಿಗೆ ಮುಖ ಬಾಡಿ ಜ್ವರ ಬಂದಿತ್ತು. ಟೀ ಕುಡಿಯುತ್ತಾ ತನ್ನ ನೋವನ್ನು ಕೆಲವರೊಂದಿಗೆ ಹಂಚಿಕೊಳ್ಳುತ್ತಿದ್ದಳು. ಮಾತ್ರೆ ತೆಗೆದುಕೊಳ್ಳುವ ಬಗ್ಗೆ ಮಾತು ತಿರುಗಿತ್ತು. "ಮಾತ್ರೆ ತೆಗೆದುಕೊಂಡರೆ, ನೋವು ಕಡಿಮೆಯಾಗುತ್ತೆ, ಆದ್ರೆ ಹಾಲು? ಹಾಲು ಖಾಯಂ ಆಗಿ ನಿಂತು ಹೋಗುತ್ತೆ. ಮತ್ತೊಂದು ಮಗುವಾದ್ರೆ ಹಾಲು ಇರೋಲ್ಲ" ಎಂದ್ಲು ಶಾಂತ. "ಒಂದು ಕೆಲ್ಸಾ ಮಾಡು ಹಾಲನ್ನು ಹಿಂಡಿ ತೆಗ್ದುಬಿಡು, ಆಗ ಎದೆ ನೋವು ಕಡಿಮೆಯಾಗುತ್ತೆ", "ಆಯ್ತು ಹಾಗೇ ಮಾಡ್ತೀನಿ" ಎಂದ್ಲು. ರಾತ್ರಿಯೆಲ್ಲ ಹಾಲು ತೆಗೆದಳು. ಆದ್ರೂ ಎದೆ ನೋವು ಕಡಿಮೆಯಾಗ್ಲಿಲ್ಲ. ಬೆಳಿಗ್ಗೆ ಪುನಃ ನರಳ್ತಾ ನರಳ್ತಾ ತರಬೇತಿಯಲ್ಲಿ ಕುಳಿತಿದ್ಲು.

ಪ್ರತಿ ರಾತ್ರಿ ಊಟದ ನಂತರ ಎಲ್ಲಾ ಹೆಣ್ಣುಮಕ್ಕಳು ಸೇರುತಿದ್ರು. ಪರಿಚಯ, ಹಾಡು, ಕಥೆ, ಒಗಟು, ಆಟ ಹೀಗೆ ಏನೇನೊ ಕಾರ್ಯಕ್ರಮಗಳು.

ಒಬ್ಬರಿಗೊಬ್ಬರು ಪರಿಚಯ ಮಾಡಿಕೊಳ್ಳುವಾಗ, ಅವರ ಬಾಲ್ಯ, ವಿದ್ಯಾಭ್ಯಾಸ, ಅವರ ಕನಸುಗಳನ್ನು ಕುರಿತು ಮಾತನಾಡಬೇಕೆಂದು ಸೂಚಿಸಿದ್ದರಿಂದ ವಿವರವಾಗಿ ತಮ್ಮ ತಮ್ಮ ಪರಿಚಯ ಮಾಡಿಕೊಳ್ಳ ತೊಡಗಿದರು. "ಎಸ್.ಎಸ್.ಎಲ್.ಸಿ ಓದ್ತಾ ಇದ್ದೆ. ಪರೀಕ್ಷೆ ಬರೆದಿದ್ದೆ, ಸೋದರ ಮಾವನಿಗೆ ಕೊಟ್ಟು ಮದ್ವೆ ಮಾಡಿದ್ರು, ಫೇಲ್ ಆದೆ. ಪುನಃ ಕಟ್ಟಲಿಲ್ಲ, ವರ ಬಂತು, ಮದುವೆ ಮಾಡಿದ್ರು, 9ನೇ ಕ್ಲಾಸ್ ಓದುತ್ತಿದ್ದೆ, ಮದುವೆ ಸೆಟ್ಲ್ ಆಯ್ತು, ಓದು ಬಿಟ್ಟೆ," ಒಂದು ಮಗು ಅಥವಾ ಎರಡು ಮಕ್ಕಳು, ಹೀಗೆ ಒಬ್ಬರಾದ ಮೇಲೆ ಒಬ್ಬರು, ಎಲ್ಲಾ ಒಂದೇ ಕಥೆ, ಆದರೆ ಗುರಿ ಒಂದೇ, **'ನಾನಂತೂ ಓದಲಿಲ್ಲ. ಮಕ್ಕಳನ್ನಾದರೂ ಚನ್ನಾಗಿ ಓದಿಸಬೇಕು'**. ಗಂಡ, ಮಕ್ಕಳು, ಮನೆ, ಅತ್ತೆ, ಮಾವ, ಹೊಲದ ಕೆಲ್ಸ, ಇದು ಬಿಟ್ರೆ ಇವರಿಗೆ ಬೇರೆ ಜಗತ್ತೆ ಇಲ್ಲ. ಹಾಗಾಗಿ ಈ ತರಬೇತಿಗೆ ಬಂದಿದ್ದು ಒಂದು ಹೊಸ ಪ್ರಪಂಚಕ್ಕೆ ಬಂದಂತೆಯೇ ಆಗಿತ್ತು.

ಎಲ್ಲರ ಪರಿಚಯದ ನಡುವೆ ತನ್ನ ಹೆಸರು ಲತಾ ಎಂದು ಹೇಳಿ "ಹೆಚ್ಚಿಗೆ ನನ್ನನ್ನು ಏನೂ ಕೇಳ್ಬೇಡಿ. ನಾನು ಏನೂ ಹೇಳುವ ಸ್ಥಿತಿಯಲ್ಲೂ ಇಲ್ಲ" ಎಂದು ಮೆಲ್ಲನೆ ನುಡಿದು ತಲೆ ಬಗ್ಗಿಸಿದಳು, ಆ ಹುಡುಗಿ. ಸಾನಿಯಾ ಮಿರ್ಜಾಥರ ಮೂಗಿಗೆ ಒಂದು ರಿಂಗ್ ಧರಿಸಿದ್ದ ಆಕೆಗೆ 22 ವರ್ಷವಿರಬಹುದು. ದಟ್ಟವಾದ ಗುಂಗುರು ಕೂದಲು. ತಲೆ ಬಗ್ಗಿಸಿದ್ದ ಆಕೆಯ ಕಣ್ಣುಗಳಲ್ಲಿ ನೀರು ತುಂಬಿತ್ತು. ಯಾರಿಗೂ ಗೊತ್ತಾಗದ ಹಾಗೆ ಕಣ್ಣೊರೆಸಿಕೊಳ್ಳುವ ಪ್ರಯತ್ನವನ್ನು ಆಕೆ ಮಾಡುತ್ತಿದ್ದಳು. ಎಲ್ಲರೂ ಸುಮ್ಮನಿದ್ದರು. ಎಲ್ಲರ ಈ ಮೌನವನ್ನು ಹೇಗೆ ಮುರಿಯುವುದೆಂದು ಯೋಚಿಸತೊಡಗಿದೆ. ಯಾರೂ ಮಾತನಾಡಲಿಲ್ಲ. ಹೀಗೆ ಒಂದೈದು ನಿಮಿಷ ಕಳೆದಿರಬಹುದು. ಕಳೆದ ಬಾರಿ ತರಬೇತಿಗೆ ಬಂದಿದ್ದ ವೆಂಕಟಲಕ್ಷ್ಮಮ್ಮನ ಅನುಭವ ಹೇಳುವುದು ಸೂಕ್ತವೆನಿಸಿ ಪ್ರಾರಂಭಿಸಿದೆ.

"ವೆಂಕಟಲಕ್ಷ್ಮಮ್ಮ ಕಪ್ಪು ಸುಂದರಿ. ನೀಳವಾದ ಕಾಯ, ಎತ್ತರವಾದ ನಿಲುವು, ಆಕೆಯ ಗಂಡ ಆಕೆಯನ್ನು ಬಿಟ್ಟು ಬೇರೆ ಮದುವೆಯಾಗಿದ್ದ. ಒಂದು ಖಾಲೀ ಕಾಗದದ ಮೇಲೆ ಆಕೆಯ ಸಹಿ ಹಾಕಿಸಿಕೊಂಡು, ಡೈವೋರ್ಸ್ ಆಗಿದೆಯೆಂದು ಎಲ್ಲರನ್ನು ಆತ ನಂಬಿಸಿದ್ದ. ಆತ ಎರಡನೇ ಮದುವೆಯಾಗಿ ಎರಡು ವರ್ಷ ಕಳೆದಿತ್ತು. ವೆಂಕಟಲಕ್ಷ್ಮಿ ತುಂಬಾ ಮುಗ್ಧ ಹುಡುಗಿ. ಗಂಡ ಬಿಟ್ಟವಳು ಎಂದು ಕರೆಸಿಕೊಳ್ಳಲು ಆಕೆಗೆ ಇಷ್ಟ ಇರ್ಲಿಲ್ಲ. 'ಗಂಡನ ಮನೆಯಲ್ಲಿ ಮನೆಕೆಲಸದವಳಾಗಿದ್ದರೂ ಪರವಾಗಿಲ್ಲ, ಅವನು ಕರೆದರೆ ವಾಪಸ್ ಅವನ ಮನೆಗೆ ಹೋಗ್ತೀನಿ', ಅಂತ ಎಲ್ಲರ ಬಳಿ ಹೇಳುತಿದ್ಲು. ತಾಯಿಗೆ ಆಕೆ ಪುನಃ ಗಂಡನ ಮನೆಗೆ ಹೋಗುವುದು ಇಷ್ಟ ಇರ್ಲಿಲ್ಲ. ಸಂಬಂಧಿಕರೆಲ್ಲಾ ಸೇರಿ ಆಕೆಗೆ ಬೇರೆ ಮದ್ವೆ ಮಾಡಲು ಪ್ರಯತ್ನಿಸಿದ್ರು. ಆಕೆ ಒಪ್ಪಿರಲಿಲ್ಲ. ಆಕೆಯ ತಾಯಿ ತುಂಬಾ ಲಿಬರಲ್ ಆಗಿದ್ರು. ಆಕೆಗೆ ಒಂದು ಮನೆ ಮಾಡಿದ್ರು, ಅವಳ ಹೆಸರಲ್ಲಿ ಸ್ವಲ್ಪ ಹಣವನ್ನು ಬ್ಯಾಂಕ್‌ನಲ್ಲಿ ಇಟ್ಟಿದ್ರು. 'ನೀನು ಯಾರನ್ನಾದರೂ ಲವ್‌ಮಾಡಿ ಮದ್ವೆಯಾದ್ರು ಪರ್ವಾಗಿಲ್ಲ' ಎಂದು ಬೆಂಬಲಿಸುತ್ತಿದ್ದರು. ಆದ್ರೆ ವೆಂಕಟಲಕ್ಷ್ಮಿಯ ಒಂದೇ ಹಠ, ಆತ ಕರೆದ್ರೆ ನಾನು ಹೋಗ್ತೀನಿ ಅಂತ. ಎಲ್ಲಾ ಹೆಣ್ಣುಮಕ್ಕಳ ಎದುರು ಇಷ್ಟು ಹೇಳಿದ ಆಕೆಯ ಕಣ್ಣುಗಳು ಮೂರುದಿನದಿಂದ ಅತ್ತು ಅತ್ತು ಕೆಂಪಾಗಿದ್ದವು. ತರಬೇತಿ ಮುಗಿಯುವುದರೊಳಗಾಗಿ, ಆಕೆಯ ತೀರ್ಮಾನ ತಪ್ಪೆಂದು, ಆಕೆಗೆ ಮನವರಿಕೆ ಮಾಡಿಕೊಟ್ಟಿದ್ದೆವು. ನೀನು ಪುನಃ ಅವನ ಮನೆಗೆ ಹೋದ್ರೆ ಕೆಲಸದಾಳಿಗಿಂತಾ ಕಡೆಯಾಗಿ ಬಾಳಬೇಕು. ಅದೆಂಥಾ ಬಾಳು ಎಂದೂ, ಅವಕಾಶ ಸಿಕ್ಕರೆ, ಬೇರೆ ಮದುವೆಯಾಗು ಎಂದೂ ಪ್ರೋತ್ಸಾಹಿಸಿದ್ದೆವು. ಮೂರು ದಿನದಲ್ಲಿ, ಎಲ್ಲರ ಒಡನಾಟ, ಭರವಸೆ, ಪ್ರೋತ್ಸಾಹ ಆಕೆಯಲ್ಲಿ ಹೊಸ ಭರವಸೆಯನ್ನು

ಮೂಡಿಸಿತ್ತು. ಆಯ್ಕೆ ಮಾಡುವ ಸ್ವತಂತ್ರ ಮನೋಭಾವನೆಯ ಬೀಜವನ್ನು ಈ ಚರ್ಚೆ ಆಕೆಯ ಮನಸ್ಸಿನಲ್ಲಿ ಬಿತ್ತಿತ್ತು" ಎಂದೆ. ವೆಂಕಟಲಕ್ಷ್ಮಮ್ಮನ ಕಥೆ ರತ್ನಳನ್ನು ಪ್ರೋತ್ಸಾಹಿಸಿತು. "ಮೇಡಂ ನನಗೇನು ಸಂಕೋಚವಿಲ್ಲ, ಇರುವುದನ್ನು ನೇರವಾಗಿ ನಾನು ಹೇಳಿಬಿಡ್ತೀನಿ. ನಮ್ಮ ತಂದೆ-ತಾಯಿಗೆ ನಾವು ಇಬ್ರುಮಕ್ಕಳು. ನನ್ನ ತಮ್ಮ ಆತ್ಮಹತ್ಯೆ ಮಾಡಿಕೊಂಡ. ಈಗ ನಾನು ಒಬ್ಳೆ ಮಗಳು ಇರೋದು. ನನ್ನ ಗಂಡ ಮದುವೆಯಾದ ಮೊದ ಮೊದ್ಲು ಚೆನ್ನಾಗಿಯೆ ಇದ್ದ. ಗಂಡನ ಮನೆಯಲ್ಲಿಯೇ ನಾನಿದ್ದೆ. ಅವರು ಸ್ವಲ್ಪ ಕಷ್ಟದಲ್ಲಿರುವವರು. 'ನಿಮ್ಮ ತಂದೆ ಮನೆಯಲ್ಲಿ ಅನುಕೂಲವಾಗಿದ್ದಾರೆ. ತವರು ಮನೆಯಿಂದ ಹಣ ತಗೊಂಡು ಬಾ' ಎಂದು ಕಿರುಕುಳ, ಹಿಂಸೆ ಶುರು ಮಾಡಿದ್ರು. ಹಿಂಸೆ ಹೆಚ್ಚಾದಾಗ ನಾನು ನನ್ನ ತಾಯಿಮನೆಗೆ ವಾಪಸ್ ಬಂದೆ. ಮದುವೆಯಾಗಿ ಒಂದು ವರ್ಷ ನನ್ನ ಗಂಡ ಸರಿಯಾಗಿದ್ದ. ನಮ್ಮ ಮನೇಲೇ ಇರೋನು. ಅವರ ತಮ್ಮನನ್ನೂ ನಮ್ಮ ಮನೆಗೆ ಕರೆದುಕೊಂಡು ಬಂದು ಇಲ್ಲೆ ಇಟ್ಕೊಂಡಿದ್ದೆ. ಬರ್ತಾ ಬರ್ತಾ, ಹಣ ಕೊಡು ಕೊಡು ಎಂದು ಜಗಳಾ ಪ್ರಾರಂಭಿಸಿದ್ರು, ಚೀಟಿ ಎತ್ತಿ ಆಟೋ ತಕ್ಕೊಡು ಎಂದ್ರು, ಸಂಪಾದನೆಗೆ ಒಂದು ದಾರಿಯಾಗುತ್ತೆ ಅಂತ ಆಟೋ ತೆಗ್ದೆ. ಅದನ್ನು ತಗೊಂಡು ಅವರ ತಮ್ಮನಿಗೆ ಕೊಟ್ರು. ಕೇಳಿದ್ರೆ ಮನೆಗೇ ಬರಲ್ಲ. ಅಲ್ಲೇ ಇದ್ದು ಬಿಡ್ತಾರೆ. ನಾನು ರೇಷ್ಮೆ ಗೂಡು ಇಡ್ತೀನಿ. ಹಣ ಬಂದಾಗಲೆಲ್ಲಾ ಹಣ ಕಿತ್ಕೊಳೋರು, ಅದನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗೋರು. ಅವರು ಹೀಗೆ ಮಾಡ್ತಾರೆ ಅಂತ ನಾನೇ ಪುನಃ ಅವರ ಮನೆಗೆ ಹೋದೆ. ಅಲ್ಲಿ ಮತ್ತೆ ಕಿರುಕುಳ ಶುರು ಮಾಡಿದ್ರು. ನಾನು ಈ ತರಬೇತಿಗೆ ಹೋಗ್ತೀನಿ ಅಂತ ಗೊತ್ತಾಗಿ, ನಾನು ಹೊರಡುವ ದಿನ ಬೆಳಿಗ್ಗೆ ರೇಷ್ಮೆ ಮೊಟ್ಟೆ ಮನೆಗೆ ತಂದ್ರು, ನಾನು ಹೋಗದೇ ಇರ್ಲಿ ಅಂತ. ನಾನು ಏನೂ ಕೇರ್‌ಮಾಡ್ದೆ ಇಲ್ಲಿಗೆ ಬಂದೆ. ನನ್ನ ಜೀವನ ಹೀಗಾಗಿದೆ. ಅವನು ಕೇಳಿದಾಗ ಹಣ ಕೊಡಬೇಕು. ಕೊಡ್ಲಿಲ್ಲಾಂದ್ರೆ ಅವನು ಅವರ ಮನೆಗೆ ಹೋಗ್ತಾನೆ. ತಿಂಗಳಾದ್ರು ಬರಲ್ಲ. ಅವನು ಓಡಿ ಹೋಗ್ತಾನೇ ಇರ್ತಾನೆ." ಹೇಳುತ್ತಲೇ ನಗತೊಡಗಿದಳು. ನಗುವಿನ ಹಿಂದೆ ಆಕೆಯ ಸಂಕಟ ಆಕೆಯನ್ನು ನೋಡಿ ನಗುತ್ತಿತ್ತು.

ಮರುದಿನ ಕಮಲಳ ಎದೆ ನೋವು ತುಂಬಾ ಹೆಚ್ಚಾಗಿತ್ತು. "ಹಾಲು ತೆಗೆದಷ್ಟೂ ಹಾಲು ಎದೆಯಲ್ಲಿ ತುಂಬಿಕೊಳ್ಳುತ್ತೆ. ಕ್ಲಾಸ್‌ನಿಂದ ಎದ್ದು ಎದ್ದು ಬರೋದು, ಎಷ್ಟು ಸಾರಿ ಬರೋದು? ನಂಗೆ ಜ್ವರ ಬಂದಂತಾಗಿದೆ. ಕ್ಲಾಸ್‌ನಲ್ಲಿ ಅವರು ಏನು ಹೇಳಿದ್ರೂ ನನ್ನ ತಲೆಗೆ ಹೋಗಲ್ಲ". ಎಂದ್ಲು. "ಮೇಡಂ, ಆಕೆ ಇನ್ನೊಂದು ಕೆಲ್ಸಾ ಮಾಡಬಹುದು. ಒಂದು ಬಿಳಿ ಬಟ್ಟೆಯನ್ನು ಬಿಗಿಯಾಗಿ ಕಟ್ಟಿಕೊಂಡು ಅದರ ಮೇಲೆ ಬ್ಲೌಸ್ ಹಾಕಿಕೊಳ್ಳಬೇಕು. ಆಗ ಸ್ವಲ್ಪ ಕಂಟ್ರೋಲ್ಗೆ ಬರುತ್ತೆ", ಪಕ್ಕದಲ್ಲಿದ್ದ ಸುನೀತಳ ಸಲಹೆ. "ಮೇಡಂ ಬಟ್ಟೇನೂ ಬೇಡ ಏನೂ ಬೇಡ, ಕಮಲಾ ನಾನು ಹೇಳ್ದಂಗೆ ಮಾಡು, ಬೆಳಕು ಹರಿಯದ್ರಲ್ಲಿ ನಿನ್ನ ನೋವು ಇದ್ರೆ ಕೇಳು. ಕೋಸಿನ ಎಲೆ ಹಾಕಿ ಬಿಗಿಯಾದ ಬ್ಲೌಸ್ ಹಾಕ್ಕೊ. ನೋಡು ಒಂದು ದಿನದಲ್ಲಿ ನೋವು ಕಡಿಮೆಯಾಗುತ್ತೆ" ಗೌರಮ್ಮನ ಸಲಹೆ. ಮೇಡಂ ಅಡಿಗೆಯವರ ಬಳಿ ಕೋಸು ಎಲೆಗಳು ಇದ್ರೆ ಕೇಳಿ ತಂದು ಕೊಡಿ ಎಂದು ನನಗೆ ಅಪ್ಪಣೆ ಕೊಡಿಸಿದ್ಲು ಗೌರಮ್ಮ. ನಾನು ಅಡಿಗೆಯವರನ್ನು ಕೇಳಿ ನಾಲ್ಕು ಕೋಸುಎಲೆಗಳನ್ನು ತಂದು ಕೊಟ್ಟೆ. ಬೆಳಿಗ್ಗೆ ಕಮಲಳ ಮುಖ ಕಮಲದಂತೆ ಅರಳಿತ್ತು. ನೋವು ಸಂಪೂರ್ಣವಾಗಿ ಕಡಿಮೆಯಾಗಿತ್ತು. ನನಗೂ ಕೋಸುಎಲೆಗಳ ಪ್ರಭಾವ ಕಂಡು ಅಚ್ಚರಿಯಾಗಿತ್ತು. ಗ್ರಾಮೀಣ ಹೆಣ್ಣು ಮಕ್ಕಳು ತಮಗೆ ತಾವೇ ವೈದ್ಯರು! ಅವಳನ್ನು ಏನಮ್ಮ ಕೋಸ್‌ಎಲೆ ಕಮಲಾ ಎಂದು ರೇಗುಸ್ತಿದ್ವಿ, ಆಕೆ ಬೇಸರಿಸದೆ ಮುಕ್ತವಾಗಿ. ನಗುತ್ತಿದ್ದಳು.

ಕೋಸ್‌ಎಲೆ ಕಮಲ ತನ್ನ ಪರಿಚಯ ಮಾಡಿಕೊಳ್ಳುತ್ತಿದ್ದಾಗ ಅವಳ ಮುಖದ ನಗು ಮಾಯವಾಗಿ ಗಂಭೀರವಾಯ್ತು. "ನಾನು ಎಸ್.ಎಸ್.ಎಲ್.ಸಿಯನ್ನು ಕಷ್ಟಪಟ್ಟು ಓದಿ ಪಾಸಾಗಿದ್ದೆ. ಚೆನ್ನಾಗಿ ಮಾರ್ಕ್ಸ್ ಸಹ ತೆಗೆದಿದ್ದೆ. ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಕೂಲಿ ಮಾಡಿ ಓದಿದ್ದೆ. ಸೀಮೆಎಣ್ಣೆ ದೀಪದಲ್ಲಿ ಓದಿ ಪಾಸಾಗಿದ್ದು. ನನಗೆ ಟೀಚರ್ ಆಗಬೇಕು ಅಂತಾ ತುಂಬಾ ಆಸೆಯಿತ್ತು. ನಮ್ಮ ಮನೆಯಲ್ಲಿ ಓದಿಸ್ಲಿಲ್ಲ. ನನ್ನ ಜೊತೆ ಇದ್ದವರು ಟಿ.ಸಿ.ಎಚ್ ಮಾಡಿ ಟೀಚರ್ಸ್ ಆಗಿದ್ದಾರೆ. ಅವರನ್ನು ನೋಡಿದಾಗಲೆಲ್ಲಾ ಹೊಟ್ಟೆಯಲ್ಲಿ ಸಂಕಟ ಆಗುತ್ತೆ. ನಾನು ಒಂದು ಮಗೂನ ಹೆತ್ತು ಕಂಕುಳಲ್ಲಿ ಇಟ್ಕೊಂಡು ಮನೇಲೇ ಇದೀನಿ". ಆಕೆಯ ಕಣ್ಣಿಂದ ದಳ ದಳ ನೀರು ಸುರಿದವು. ಆಕೆ ಒರೆಸಿಕೊಳ್ಳುವ ಪ್ರಯತ್ನವನ್ನೂ ಮಾಡ್ಲಿಲ್ಲ.



ವಿಮಲಾ ತನ್ನ ಸರದಿ ಬಂದಾಗ ತುಂಬಾ ಚುಟುಕಾಗಿ ತನ್ನ ಮದುವೆಯಾದದ್ದು, ಗಂಡ ಕರೆಂಟ್‌ಶಾಕ್‌ನಿಂದ ಸತ್ತದ್ದು ಹೇಳಿದಳು, ತನ್ನ ಮಗನ ಬಗ್ಗೆ ಹೇಳುತ್ತಾ ತಾನು ಮನೆಬಿಟ್ಟು ಇದೇ ಮೊದಲ ಬಾರಿ ಬಂದಿದ್ದು, ಹಾಗಾಗಿ ಮನೆಯವವರಿಗೆಲ್ಲಾ ಆತಂಕ. ಎಲ್ಲಿಗೆ ಹೋದ್ರು ಯಾರ್ನಾದರೂ ಜೊತೆಗೆ ಕರೆದುಕೊಂಡು ಹೋಗ್ಬೇಕು ಎಂದಳು. ಇಲ್ಲಿಗೂ ಫೋನ್‌ಮಾಡಿ ಆಕೆಯನ್ನು ಎಲ್ಲರೂ ವಿಚಾರಿಸಿಕೊಳ್ಳುತ್ತಿದ್ದರು, ಅದು ಒಂದು ಥರದ ಬೆಚ್ಚನೆಯ ರಕ್ಷಣೆ. ಒಂಟಿ ಹೆಂಗ್ಸು, ಹೊಲ, ಮನೆ, ಮಗನ ಜವಾಬ್ದಾರಿ. ಗಂಡ ಸತ್ತ ಆಕೆಗೆ ಆಸ್ತಿಯನ್ನು ಕೊಡಬೇಕಾಗುತ್ತೆ ಅಂತ ಮನೆಯಿಂದ ಹೊರಹಾಕುವವರೇ ಹೆಚ್ಚಾಗಿರುವ ಸಂದರ್ಭದಲ್ಲಿ ಆಕೆಯ ಗಂಡನ ಮನೆಯವರ ನೆರವು, ಸಹಕಾರ ಒಂದೇ ಆಕೆಗಿದ್ದ ನೆರವಿನ ಆಸರೆ. ಈ ಕಾರಣದಿಂದ ಆಕೆಯ ಬದುಕು ನಿರಾತಂಕವಾಗಿದೆ.

ಮೂರು ದಿನದ ತರಬೇತಿಯಲ್ಲಿ ಮೌನಿ ಲತಾ ಸಾಕಷ್ಟು ಬದಲಾಗಿದ್ದಳು, "ಈ ಅನುಭವ ನನ್ನ ಜೀವನದಲ್ಲಿ ಮರೆಯಲಾಗದ್ದು. ನನ್ನ ಜೀವನದಲ್ಲಿ ಹೀಗೆ ಮೂರುದಿನ ತರಬೇತಿಗೆ ಬಂದು ಭಾಗವಹಿಸುತ್ತೇನೆಂಬ ಕನಸೂ ನನಗೆ ಇರ್ಲಿಲ್ಲ". ಆಕೆ ಮಾತನಾಡುವಂತಾಗಿದ್ದಳು. ಪ್ರೀತಿಸಿ ಮದುವೆಯಾಗಿದ್ದ ಗಂಡ ಅಪಘಾತದಲ್ಲಿ ಮರಣ ಹೊಂದಿದ್ದ. ಮನೆಯಲ್ಲಿ ವಯಸ್ಸಾದ ತಂದೆ-ತಾಯಿ, ಆಕೆಯ ಸಮಸ್ಯೆ ಬಿಸಿಬಿಸಿಯಾದ ಚರ್ಚೆಗೆ ಇಂಬು ನೀಡಿತ್ತು. ಬಹುಪಾಲು ಹೆಣ್ಣುಮಕ್ಕಳು ಆಕೆ ಮರುಮದುವೆಯಾಗಬೇಕೆಂದೂ ಪುರುಷರು ಹೆಂಡತಿ ಸತ್ತರೆ ಒಂದು ತಿಂಗಳ ಒಳಗೆ ಮದುವೆಯಾಗುತ್ತಾರೆ, ಹೀಗಿರುವ ಸನ್ನಿವೇಶದಲ್ಲಿ ಆಕೆ ಮದುವೆ ಆಗುವುದೇ ಸೂಕ್ತ ಎಂದು ಆಕೆಯನ್ನು ಪ್ರೋತ್ಸಾಹಿಸಿದ್ದರು. ಆದರೆ ಮದುವೆಯಾಗುವಾಗ ಸರಿಯಾಗಿ ವಿಚಾರಿಸಿ, ಉತ್ತಮ ಹುಡುಗನನ್ನು ಮದುವೆಯಾಗಬೇಕೆಂದು ಎಚ್ಚರಿಸಿದರು. ಆದರೆ ಒಂದಿಬ್ಬರು ಮಾತ್ರಾ, ಮದುವೆಯಾದ ನಂತರ

ಗಂಡ ಕಿರುಕುಳ ನೀಡಿದರೆ, ಬಾಣಲಿಯಿಂದ ಬೆಂಕಿಗೆ ಬಿದ್ದಂತಾಗುತ್ತದೆ ಯೆಂದೂ, ಆಕೆ ಕೆಲಸಕ್ಕೆ ಹೋಗಿ ಒಂಟಿಯಾಗಿ ಜೀವನ ನಿರ್ವಹಿಸು ವುದೇ ಸರಿಯೆಂದೂ ವಾದಿಸಿದ್ದರು. ಈ ಎರಡೂ ವಾದವನ್ನು ನಿರ್ಲಿಪ್ತವಾಗಿ ಆಲಿಸಿದ ಲತಾ ತಾನು ಪ್ರೀತಿಸಿದ ಗಂಡನನ್ನು ಮರೆಯಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದರೂ ಆಕೆಯ ಮನಸ್ಸು, ಮುಖ ಎರಡೂ ಅರಳಿದ್ದು ಮಾತ್ರ ನಿಜ.

ತರಬೇತಿಯ ಸಮಯದಲ್ಲಿ ಎಲ್ಲರನ್ನೂ ನಕ್ಕು ನಲಿಸಿದ ಗೌರಮ್ಮನ ಎದೆಯಲ್ಲಿ ಬಚ್ಚಿಟ್ಟುಕೊಂಡ ನೋವು ಯಾರಿಗೂ ತಿಳಿಯಲೇ ಇಲ್ಲ. ತರಬೇತಿಯ ಎಲ್ಲ ಚಟುವಟಿಕೆಯಲ್ಲಿ ಯಾವುದೇ ಮುಜುಗರ, ಸಂಕೋಚವಿಲ್ಲದೆ ಭಾಗವಹಿಸುತ್ತಿದ್ದರು. ಇತರ ಹುಡುಗಿಯರಿಗಿಂತ ವಯಸ್ಸಿನಲ್ಲಿ ದೊಡ್ಡವರಾಗಿದ್ದರು. ಹಾಡು ಹೇಳುವುದು, ಮೈ ಚಳಿ ಬಿಟ್ಟು ಡ್ಯಾನ್ಸ್ ಮಾಡುವುದು, ಜೋಕ್ಸ್ ಹೇಳುವುದು ಮಾಡುತ್ತಿದ್ದರು. ಎಲ್ಲರೊಂದಿಗೆ ಕಬಡ್ಡಿ ಆಟ ಆಡಿ ನಗಿಸುತ್ತಿದ್ದರು. ಸಾಮಾನ್ಯವಾಗಿ ಹೆಣ್ಣುಮಕ್ಕಳ ಚಲನೆಯು ನಿಯಂತ್ರಣಗೊಂಡಿರುತ್ತದೆ. ಎಷ್ಟೇ ಬಲವಂತ ಮಾಡಿದರೂ ಕುರ್ಚಿ ಬಿಟ್ಟು ಮೇಲೇಳದ ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳಿ ಗಿಂತ ಗೌರಮ್ಮ ವಿಭಿನ್ನವಾಗಿದ್ದರು. ಆಕೆ ಎಷ್ಟು ಫ್ರೀ ಆಗಿದ್ದರು ಎಂದರೆ ಮೂರುದಿನದ ತರಬೇತಿಯಲ್ಲಿ ಮುಗ್ಧಬಾಲೆಯಾಗಿ ಕಂಡಿದ್ದಳು; ನಲಿದಿದ್ದಳು.

ಗೌರಮ್ಮ ತನ್ನ ಎದೆಯೊಳಗಿನ ನೋವನ್ನು ಕೊನೆಗೂ ಯಾರಲ್ಲೂ ಹಂಚಿಕೊಳ್ಳಲಿಲ್ಲ, ಆಕೆಯ ಮಗಳು ಎಸ್.ಎಸ್.ಎಲ್.ಸಿ. ಓದಿದ್ದಳು. ಆಕೆಯ ಮದುವೆಯ ನಿಶ್ಚಿತಾರ್ಥವನ್ನು ಮಾಡಿದ್ದರು. ಹಣಕಾಸಿನ ಅಡಚಣೆಯಿಂದ ಮದುವೆಯನ್ನು ಮುಂದೂಡಿದ್ದರು. ಹುಡುಗ ಆಗಾಗ ಮನೆಗೆ ಬಂದು ಹೋಗುತ್ತಿದ್ದ. ಹೀಗೆ ಒಂದು ದಿನ ಬಂದವನು ನಿಮ್ಮ ತಂದೆ ತಾಯಿ ಮದುವೆಯನ್ನು ಮುಂದೂಡಿದರೆ ನಾನು ಬೇರೆ ಹುಡುಗಿಯನ್ನು ಮದುವೆ ಮಾಡಿಕೊಳ್ಳುತ್ತೇನೆಂದು ಹೇಳಿ ಹೋಗಿದ್ದ. ಮನೆಯಲ್ಲಿ ಯಾರೂ ಇರಲಿಲ್ಲ. ಆತ ಮನೆಯಿಂದ ಹೋದ ತಕ್ಷಣ ಗೌರಮ್ಮನ ಮಗಳು ತೋಟದ ಬಾವಿಗೆ ಹಾರಿದ್ದಳು. ಕೇಸ್ ಹಾಕಿ ಎಂದರು ಕೆಲವರು. ಕೇಸ್ ಹಾಕಿದ್ರೆ ಸತ್ತ ಮಗಳು ವಾಪಸ್ ಬರ್ತಾಳೆಯೇ ಎಂದವರು ಹಲವರು. ಕುಂಕುಮ ಹಚ್ಚಿ, ಹೂವಿಟ್ಟ ಮಗಳ ಫೋಟೋದ ಕಿತ್ತು ತಿನ್ನುವ ನೆನಪು ಅವಳ ನಗುವಿನ ಹಿಂದಿರುವ ನೋವು. ನೆನಪ ಮರೆಯಲು ನಗುತ್ತಿದ್ದಳೊ, ನಗು ನೆನಪನ್ನು ಮರೆಸುತ್ತಿತ್ತೊ ಗೊತ್ತಿಲ್ಲ. ಸದಾ ನಗುತ್ತಿದ್ದಳು ಮಾತ್ರ.

ಫೋನ್‌ಕಾಲ್ ಪುಟ್ಟಲಕ್ಷ್ಮಮ್ಮಳ ಕಥೆಯೇ ಬೇರೆ. ಈಕೆ ವಯಸ್ಸಿನಲ್ಲಿ ಎಲ್ಲರಿಗಿಂತ ದೊಡ್ಡವರು. ಎಸ್.ಎಸ್.ಎಲ್.ಸಿ. ಓದಿದ್ದರು. ಆಕೆ ತರಬೇತಿಗೆ ಬಂದಿಳಿಯುತ್ತಿದ್ದ ಹಾಗೆ ಫೋನ್ ಕಾಲ್‌ಗಳು ಬರಲು ಪ್ರಾರಂಭಿಸಿದವು. ಫೋನ್‌ಕಾಲ್ ಬಂದ ತಕ್ಷಣ ಆಕೆ ಸೆಲ್‌ಫೋನ್ ತೆಗೆದುಕೊಂಡು ದೂರಹೋಗಿ ಮಾತನಾಡುತ್ತಿದ್ದರು. ಆಕೆ ಹೀಗೆ ಮಾತನಾಡುವಾಗ ಒಂದೆರಡು ಮಾತುಗಳು ಕಿವಿಯ ಮೇಲೆ ಬೀಳುತ್ತಿದ್ದವು. "ನಾನು ಎಲ್ಲಾ ಮಾಡಿ ಇಟ್ಟು ಬಂದಿದ್ದೇನೆ. ಇನ್ನೊಂದೇ ದಿನ, ಬಂದು ಬಿಡ್ತೀನಿ" ಹೀಗೆ ಏನೇನೊ, ಸಂಜೆಯಾಗುತ್ತಿದ್ದ ಹಾಗೆ ಆಕೆಯ ಮುಖ ತುಂಬಾ ದುಗುಡದಿಂದ ಕೂಡಿತ್ತು. ಮೇಡಂ, ನಮ್ಮ ನೆಂಟರೊಬ್ಬರು ತುಂಬಾ ಸೀರಿಯಸ್ ಆಗಿದ್ದಾರೆ. ನಾನು ಆಸ್ಪತ್ರೆಗೆ ಹೋಗಿ ಅವರನ್ನು ನೋಡಿಕೊಂಡು ಬೆಳಿಗ್ಗೆ ಬಂದುಬಿಡ್ತೀನಿ ಎಂದರು. ನಾನು ಹಿಂಜರಿದೆ. ಹೊಸ ಜಾಗ, ಅವರಿಗೆ ಹೋಗಲು ತಿಳಿಯುವುದಿಲ್ಲ ಎಂದು ಬೇಡವೆಂದೆ, ಆಕೆ ಹಠ ಬಿಡಲಿಲ್ಲ. 'ನೀವು ಹೆದರಬೇಡಿ, ನಿಮ್ಮ ಜವಾಬ್ದಾರಿ ನನಗೆ ಗೊತ್ತು ನಾನು ಬೆಳಿಗ್ಗೆ ಕ್ಲಾಸ್ ಪ್ರಾರಂಭ ವಾಗುವುದರೊಳಗೆ ಬಂದುಬಿಡ್ತೀನಿ. ಹೋಗ್ದೆ ಇದ್ರೆ ಎಲ್ಲರೂ ಆಡಿಕೊಳ್ತಾರೆ' ಎಂದು ಹೊರಟೇಬಿಟ್ರು, ಬೆಳಿಗ್ಗೆ ಸರಿಯಾದ ಸಮಯಕ್ಕೆ ವಾಪಸ್ ಬಂದ್ರು. ನಂತರ ತಿಳಿದದ್ದು, ಅವರ ದೊಡ್ಡ ಮಗ ಅವರನ್ನು ಹೆದರಿಸಿ ಫೋನ್ ಮಾಡ್ತಿದ್ದ. 'ನೀನು ಹೀಗೆ ಹೋದ್ರೆ ಇಲ್ಲಿ ಅಡುಗೆ ಮಾಡುವವರು ಯಾರು?' ಎಂದು ಜೋರು ಮಾಡಿ ಬೈದಿದ್ದ. ಹಾಗಾಗಿ ಅವರು ಹೋಗಿದ್ದು. ಅದೇನು ಮಾಡಿ ಬಂದ್ರೊ ಕೊನೆಗೂ ಗೊತ್ತಾಗಲಿಲ್ಲ.

ಆಕೆಗೊಂದು ಅದ್ಭುತವಾದ ಟ್ಯಾಲೆಂಟ್ ಇತ್ತು. ಸುಮಧುರ ಕಂಠ ಆಕೆಗಿತ್ತು. ಕನ್ನಡ ಸಿನಿಮಾದ ಹಳೆಯ ಹಾಡುಗಳನ್ನು ಒಂದು ಸಾಲೂ ತಪ್ಪದೇ ಹೇಳುತ್ತಿದ್ದರು. ಆಕೆಯ ನೆನಪಿನ ಶಕ್ತಿಯು ಆಶ್ಚರ್ಯಕರವಾಗಿತ್ತು. ಮೂರುದಿನ ಸಮಯ ಸಿಕ್ಕಾಗಲೆಲ್ಲ 'ಹಾಡಿ ಅಮ್ಮಾ ಹಾಡಿ, ಹಾಡಿ' ಎಂದು ಎಲ್ಲರೂ ಪೀಡಿಸುತ್ತಿದ್ದರು. ಅಷ್ಟು ವಯಸ್ಸಾಗಿದ್ರು ಕಂಠ-ಶೃತಿ ತುಂಬಾ ಚೆನ್ನಾಗಿತ್ತು. 'ಚಿಕ್ಕ ವಯಸ್ಸಿನಲ್ಲಿ ಹಾಡ್ತಿದ್ದೆ. ಹೀಗೆ ಯಾವತ್ತು ಹಾಡಿರಲಿಲ್ಲ. ನೀನು ತುಂಬಾ ಚೆನ್ನಾಗಿ ಹಾಡ್ತೀಯಾ ಹಾಡು ಅಂತ ಯಾರು ಕೇಳ್ತಾರೆ?' ಇದ್ದ ಮೂರುದಿನದಲ್ಲಿ, ಪೀಡಿಸುತ್ತಿದ್ದ ಗಂಡ ಹಾಗೂ ಮಗನ ಫೋನ್ ಕಾಲ್‌ಗಳಿಂದ ಆಕೆಯ ಮನಸ್ಸು ಸದಾ ದುಗುಡ ಹಾಗೂ ಆತಂಕದಿಂದ ಕೂಡಿತ್ತು. ಹಾಡು ಹೇಳುವಾಗ ಮಾತ್ರ ಆಕೆ ತನ್ಮಯಳಾಗಿ ಎಲ್ಲವನ್ನೂ ಮರೆತುಬಿಡ್ತಿದ್ರು. ರಾತ್ರಿ ಹನ್ನೆರಡು ಗಂಟೆಯವರೆಗೂ ನಡೆಯುತ್ತಿದ್ದ ಅನೌಪಚಾರಿಕ ಮಾತುಕತೆ, ಹಾಡು, ಆಟಪಾಠ, ನಗು ತಮಾಷೆ ಹರಟೆ, ಜೋಕ್ಸ್ ಹೇಳುವುದು ಡ್ಯಾನ್ಸ್ ಇವು ಅನಂತರವೂ ಅವರವರ ಕೊಠಡಿಯಲ್ಲೂ ರಾತ್ರಿ 2 ಗಂಟೆಯವರೆಗೆ ಮುಂದುವರೆಯುತ್ತಿದ್ದವು. ಕೃಷಿ ಕುಟುಂಬ ಅಥವಾ ಹೆಣ್ಣುಮಕ್ಕಳಿಗೆ ಬಿಡುವು ಸಿಗುವುದೇ ಅಪರೂಪ. ಸದಾ ಗಂಡ ಮನೆ ಮಕ್ಕಳು, ವ್ಯವಸಾಯ, ಹೈನುಗಾರಿಕೆ, ಕೂಲಿ ನಾಲಿಯಲ್ಲಿ ಮುಳುಗಿ ಹೋದ ಇವರಿಗೆ ಈ ಮೂರು ದಿನದ ಅನುಭವ ವಿಶಿಷ್ಟವಾದದ್ದು. ಮೂರೂ ದಿನ 'ಸಮಯ' ಸಂಪೂರ್ಣವಾಗಿ ಅವರದಾಗಿತ್ತು. ಯಾವುದೇ ನಿರ್ಬಂಧ, ಭಯದ ನೆರಳು ಅಲ್ಲಿ ಬೀಳುವ ಹಾಗಿರಲಿಲ್ಲ. ಈ ಹೆಣ್ಣು ಮಕ್ಕಳ ನಗು, ಸದ್ದು ಗದ್ದಲ ನೀರವ ರಾತ್ರಿಯ ಗರ್ಭ ಸೀಳಿಕೊಂಡು ಹೊರಬಂದ ಗೆಜ್ಜೆಯ ನಾದವಾಗಿತ್ತು. ❑

ವಿಶ್ವದಲ್ಲಿ

1. *ಇಡೀ ವಿಶ್ವದಲ್ಲಿ ಶೇ 67ರಷ್ಟು ಅವಧಿಯ ದುಡಿಮೆಯನ್ನು ಮಹಿಳೆಯರು ಮಾಡುತ್ತಾರೆ.*
2. *ಅವರಿಗೆ ಸಿಗುವ ಆದಾಯ ಕೇವಲ ಶೇ 10ರಷ್ಟು*
3. *ಪುರುಷರು ಹಾಗೂ ಮಹಿಳೆಯರು ಮಾಡುವ ಸಮಾನ ಕೆಲಸಕ್ಕೆ ಮಹಿಳೆಯರು ಶೇ 30-40ರಷ್ಟು ಕಡಿಮೆ ವೇತನ ಪಡೆಯುತ್ತಾರೆ.*
4. *ಅಭಿವೃದ್ಧಿ ಶೀಲ ದೇಶಗಳಲ್ಲಿ ಶೇ 60-80ರಷ್ಟು ಆಹಾರವನ್ನು ಮಹಿಳೆಯರು ತಯಾರಿಸುತ್ತಾರೆ.*
5. *ವಿಶ್ವದಲ್ಲಿ ಶೇ 10-12ರಷ್ಟು ಮಹಿಳೆಯರು ವ್ಯವಸ್ಥಾಪಕ ಹಾಗೂ ಆಡಳಿತಾತ್ಮಕ ಉದ್ಯೋಗವನ್ನು ಮಾಡುತ್ತಿದ್ದಾರೆ*
6. *ವಿಶ್ವದಲ್ಲಿ ಶೇ 5ಕ್ಕಿಂತ ಕಡಿಮೆ ಮಹಿಳೆಯರು ದೇಶದ ರಾಜಕೀಯದಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ.*

ಅಂಬಿ

–ಅಜ್ಜಿಯ ಇತಿಹಾಸ ಬರೆದ ಮೊಮ್ಮಗಳು

● ದು. ಸರಸ್ವತಿ

'ಅಂಬಿ' ಪುಸ್ತಕ ಕುರಿತು ಎರಡು ತಿಂಗಳ ಹಿಂದೆಯೇ ಬರೆಯಬೇಕಿತ್ತು. ಅನಿವಾರ್ಯ ಕಾರಣಗಳಿಂದಾಗಿ ಬರೆಯಲಾಗಲಿಲ್ಲ. ಬರೆಯದೇ ಇದ್ದುದಕ್ಕೆ ವಿಪರೀತ ನೋವೆನಿಸುತ್ತದೆ. ಕಾರಣ ಈ ಪುಸ್ತಕ ಬರೆದ ವಿಮಲಾ ಮೂರ್ತಿಯವರು ಇತ್ತೀಚೆಗಷ್ಟೆ ನಿಧನರಾದರು. ಪುಸ್ತಕ ಕುರಿತು ಬರೆಯುವ ಹೊತ್ತಿನಲ್ಲಿ ಪದೇ ಪದೇ ಆಕೆಯ ಚಿತ್ರವೇ ಕಣ್ಮುಂದೆ ಬರುತ್ತಿದೆ. ಮಾನಸದ ಬೆಂಬಲಿಗರೂ ಆಗಿದ್ದ ಅವರ ಕುರಿತು ಬರೆದನಂತರ ಪುಸ್ತಕ ಕುರಿತು ಬರೆಯುತ್ತೇನೆ.

ವಿಮಲ ಮೂರ್ತಿಯವರು ನನ್ನ ಗೆಳತಿ ಲಕ್ಷ್ಮಿಯ ತಾಯಿ. ಲಕ್ಷ್ಮಿ ಮಹಿಳಾ ಚಳವಳಿಯ ಹಾದಿಯಲ್ಲಿ ಅತ್ಯಂತ ಮಹತ್ವದ, ಅರ್ಥಪೂರ್ಣವಾದ ಹೆಜ್ಜೆಗಳನ್ನಿಡುತ್ತ ಸಾಗಿರುವ ಸ್ವಾಯತ್ತ ಮಹಿಳಾ ಸಂಘಟನೆ 'ಸಹೇಲಿ'ಯ ಸದಸ್ಯೆ. ಆಕೆ ಮಾನಸದ ಸಕ್ರಿಯ ಬೆಂಬಲಿಗರು. ಬೆಂಗಳೂರಿನಲ್ಲಿ ವಾಸವಾಗಿದ್ದ ವಿಮಲ ಮೂರ್ತಿಯವರನ್ನು ಲಕ್ಷ್ಮಿ ಹಲವಾರು ವರ್ಷಗಳ ಹಿಂದೆಯೆ ಪರಿಚಯ ಮಾಡಿಕೊಟ್ಟಳು. ಅಂದಿನಿಂದಲೂ ವಿಮಲ ಅವರು ಒಂದಲ್ಲ ಒಂದು ರೀತಿ ಸಂಪರ್ಕ ಇಟ್ಟುಕೊಂಡಿದ್ದರು. ಓದು, ಬರವಣಿಗೆ, ಮಕ್ಕಳ ಶಿಕ್ಷಣ, ಪ್ರವಾಸ, ಸಂಗೀತ, ಸಾಂಸ್ಕೃತಿಕ ಚಟುವಟಿಕೆಗಳು ಹೀಗೆ ಹಲವಾರು ಆಸಕ್ತಿಗಳನ್ನಿಟ್ಟುಕೊಂಡು ಸದಾ ಕ್ರಿಯಾಶೀಲರಾಗಿದ್ದರು. ಎಲ್ಲರೊಡನೆಯೂ ಪ್ರೀತಿಯಿಂದ ಬೆರೆಯುತ್ತಿದ್ದ ಆಕೆಯದು ಬೆಚ್ಚನೆಯ ವ್ಯಕ್ತಿತ್ವ. ಆಕೆಯ ಸ್ನೇಹಕ್ಕೆ ವಯಸ್ಸಿನ ಮಾನದಂಡವೇ ಇರಲಿಲ್ಲ. ಪುಟ್ಟಮಕ್ಕಳಿಂದ ಹಿಡಿದು ಮುದುಕರವರೆಗೂ ಆಕೆಗೆ ಸ್ನೇಹಿತರಿದ್ದರು. ಮಡಿವಂತರಿಂದ ಹಿಡಿದು ಕಟ್ಟಾ ವಿಚಾರವಂತರವರೆಗೂ ಆಕೆಯ ಸ್ನೇಹದ ಬಳ್ಳಿ ಚಾಚಿಕೊಂಡಿತ್ತು. ಯಾವುದೇ ಸಾಂಸ್ಕೃತಿಕ ಚಟುವಟಿಕೆ ಮಾಡುವಾಗಲೂ ಸಂಪರ್ಕಿಸಿ ನಾಟಕ ಮಾಡಲು ಹೇಳುತ್ತಿದ್ದರು. ನಾವು ಮಾಡುವ ನಾಟಕ ಕುರಿತು, ಮಾನಸ ಪತ್ರಿಕೆ ಕುರಿತು, ಅನೇಕರಿಗೆ ಹೇಳುತ್ತಿದ್ದರು. ಸಾಧ್ಯವಾದಕಡೆಯಲ್ಲೆಲ್ಲ ಮಹಿಳಾ ಚಳವಳಿ ಕುರಿತು ಮಾತನಾಡಲು ಕರೆಯುತ್ತಿದ್ದರು. ಆಕೆಗಿದ್ದ ಜೀವನ ಪ್ರೀತಿಯನ್ನು ಆಕೆ ಮಾಡುವ ಎಲ್ಲ ಚಟುವಟಿಕೆಗಳಲ್ಲೂ ಕಾಣಬಹುದಿತ್ತು. ಯಾವ ವಿಷಯಕ್ಕೇ ಆಗಲಿ ಚೈತನ್ಯಪೂರ್ಣವಾಗಿ ಸ್ಪಂದಿಸುತ್ತಿದ್ದರು.

ಕೆಲವು ತಿಂಗಳ ಹಿಂದೆ ಅವರಿಗೆ ಕ್ಯಾನ್ಸರ್ ಬಂದಿದೆ ಎಂಬ ವಿಷಯ –ತುಂಬ ತಡವಾಗಿಯೇ–ತಿಳಿಯಿತು. ಏನು ಮಾತನಾಡುವುದು? ಹೇಗೆ ಮಾತನಾಡುವುದು? ಎಂದು ಯೋಚಿಸುತ್ತಲೇ ನೋಡಲು ಹೋದೆ. ಆಪರೇಷನ್ ಆಗಿ ಮನೆಯಲ್ಲಿದ್ದರು. ನೋಡಿದ ತಕ್ಷಣ ಅವರೇ ಎಂದು ಗುರುತಿಸಲಾಗಲಿಲ್ಲ. ಕೂದಲು ಕತ್ತರಿಸಿದ್ದರು. ಪ್ಯಾಂಟ್, ಟೀ-ಶರ್ಟ್ ಹಾಕಿಕೊಂಡಿದ್ದರು. ನನ್ನ ಮುಖ ನೋಡಿ ನಗುತ್ತ 'Costume, Hairstyle ಎಲ್ಲ ಚೇಂಜ್ ಆಗಿದೆ. ಅದಕ್ಕೇ ನಿಂಗೆ ಗುರ್ತು ಸಿಗ್ಲಿಲ್ಲ' ಎಂದರು. ಕ್ಯಾನ್ಸರ್ ಅವರನ್ನು ಯಾವ ರೀತಿಯಲ್ಲೂ ಅಲ್ಲಾಡಿಸಿರಲಿಲ್ಲ. ಕಳೆದ ವರ್ಷವಷ್ಟೇ ತಾವು ಬರೆದು ಪ್ರಕಟಿಸಿದ್ದ 'ಅಂಬಿ' ಪುಸ್ತಕ ಕೊಟ್ಟರು. 'ಪುಸ್ತಕ ಮಾರಾಟದ ಹಣವನ್ನು ಹೆಣ್ಣುಮಕ್ಕಳ ಶಿಕ್ಷಣಕ್ಕೆಂದು ಮೀಸಲಿಟ್ಟಿದ್ದೇನೆ' ಎಂದರು. ಸಪ್ಪಗೆ ಹೋಗಿದ್ದ ನನ್ನೊಂದಿಗೆ ನಗುತ್ತ ಮಾತನಾಡಿ ಕಳಿಸಿದರು. ರೇಡಿಯೇಷನ್ ಚಿಕಿತ್ಸೆ ಪ್ರಾರಂಭಿಸಿದ ಮೇಲೆ ಮತ್ತೆ ಮಾತನಾಡಿಸಿ ಬರಲು ಹೋದೆ. 'ಚೆನ್ನಾಗಿ ಕಾಣಿಸ್ತಿದೀರಾ ಆಂಟಿ, ಈಗ ಹೇಗಿದೀರಾ' ಎಂದರೆ; 'ಪರ್ವಾಗಿಲ್ಲ, ನಿನ್ನೆಯಿಂದ ಸ್ವಲ್ಪ ನಡೀತಿದೀನಿ' ಅಂದ್ರು. 'ಚೆನ್ನಾಗಿ ನಡೀತಿದ್ರಲ್ಲ, ರೇಡಿಯೇಷನ್‌ನಿಂದ ಸುಸ್ತಾಯ್ತಾ' ಎಂದು ಕೇಳಿದೆ. 'ಹೊ, ನಿಂಗೆ ಗೊತ್ತಿಲ್ವ ಬಿದ್ದು Pelvic bone fracture ಆಗಿ, ಆಪರೇಷನ್ ಆಗಿ two weeks ಆಯ್ತು' ಅಂದ್ರು. ಮುಖದಲ್ಲಿ ಯಾವ ಕೊರಗು, ಚಿಂತೆ ಇಲ್ಲ. ನಾನು ದಂಗಾಗಿ ಹೋದೆ. ನಗುತ್ತ ನನ್ನೊಡನೆ ಹರಟೆ ಹೊಡೆದರು. 'ಅಗತ್ಯ ಬಿದ್ದಾಗ ಫೋನ್ ಮಾಡಿ, ಬರ್ತೀನಿ' ಅಂದೆ. "ಖಂಡಿತ. ಲಕ್ಷ್ಮಿಯ friends ಎಲ್ಲ ನನ್ಗೆ ನನ್ನ ಮಕ್ಳಿದ್ದಂಗೆ. ನೀಲಾಂಜನ ಎರಡು ದಿವ್ಸ ಬಂದು ಬೆಳಿಗ್ಗಿಂದ ಸಂಜೆವರ್ಗೂ ಇದ್ದು ಹೋದ್ಲು. ಫೆಮಿನಿಸ್ಟರ್ದೆಲ್ಲ real sisterhood" ಅಂದ್ರು.

ಮತ್ತೆ ಹೋಗಿ ಅವರಿಗೆ 'ರೂಮಿ' ಪದ್ಯ ಓದ್ಬೇಕು ಅಂತ ಸಿದ್ಧವಾಗ್ತ ಇದ್ದೆ. ನೀಲಾಂಜನ ಫೋನ್ ಮಾಡಿ 'ಗೊತ್ತಾಯ್ತಾ? ಇವತ್ತು ಸಂಜೆ ಆರೂಕಾಲಿಗೆ ಲಕ್ಷ್ಮಿ ಅಮ್ಮ ತೀರ್‍ಕೊಂಡ್ರು. Massive heart attack' ಅಂದ್ಲು. ಉಸಿರಾಡಲು ಕಷ್ಟ ಆಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಕಾರಿನಲ್ಲಿ ಕೂರಿಸಿದ್ದಾರಷ್ಟೆ; ಕೇವಲ ಆರೇಳು ನಿಮಿಷದಲ್ಲಿ ತೀರಿಕೊಂಡಿದ್ದಾರೆ. ಕ್ಯಾನ್ಸರ್ ಬಂದಾಗ ಅವರಾಡಿದ ಮಾತನ್ನು ಸ್ನೇಹಿತೆ ಹೇಳಿದ್ದು ನೆನಪಾಯ್ತು. "I had a good life. I don't mind dying. I want to die peacefully" ಕ್ಯಾನ್ಸರ್‌ನಂತಹ ಖಾಯಿಲೆಯನ್ನ, ಸಾವನ್ನ, ಇಷ್ಟು ನಿರುಮ್ಮಳವಾಗಿ ತೆಗೆದುಕೊಂಡ ವ್ಯಕ್ತಿಯನ್ನು ನಾನು ಹತ್ತಿರದಿಂದ ಕಂಡಿದ್ದು ಇದೇ ಮೊದಲು. ಮಾರಣಾಂತಿಕ ಖಾಯಿಲೆಯನ್ನಾಗಲಿ, ಮರಣವನ್ನಾಗಲಿ



ವಿಮಲಾಮೂರ್ತಿ

ಮನುಷ್ಯ ಚೈತನ್ಯ ಶಾಂತಿಯಿಂದಲೇ ನಿಭಾಯಿಸಬಲ್ಲದೆಂದು ಮನವರಿಕೆಯಾಯಿತು. **ವಿಮಲ ಆಂಟಿ ನಿಮಗೆ ತಲೆಬಾಗಿ ಶರಣು.**

ಅವರು ಬರೆದ 'ಅಂಬಿ' ಪುಸ್ತಕದ ಬಗ್ಗೆ ನಾಲ್ಕು ಮಾತು ಹೇಳುವ ಮೂಲಕ ಅಗಲಿದ ಚೇತನಕ್ಕೆ ಮಾನಸ ಬಳಗ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಅಂಬಿ:


ಸಂಕಟಕ್ಕೆ ಈಡಾದ ಮಹಿಳೆಯರು, ಬದುಕು ಒಡ್ಡುವ ಸವಾಲುಗಳನ್ನು ಎದುರಿಸಲು ಸ್ಫೂರ್ತಿ ಪಡೆದುಕೊಳ್ಳಬಹುದು ಎಂಬ ಉದ್ದೇಶದಿಂದ ನನ್ನ ಅಜ್ಜಿಯ ಹೋರಾಟದ ಬದುಕಿನ ಕತೆಯನ್ನು ದಾಖಲಿಸುವ ಪ್ರಯತ್ನ ಮಾಡಿದ್ದೇನೆ ಎಂದು ವಿಮಲಾರವರು ಮುನ್ನುಡಿಯಲ್ಲಿ ಬರೆದಿದ್ದಾರೆ. ಇಪ್ಪತ್ನಾಲ್ಕನೇ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡ, ಮೂರು ಮಕ್ಕಳ ತಾಯಿ ಅಂಬಾಬಾಯಿ (1889-1970) ಮತ್ತೆ ಶಿಕ್ಷಣ ಮುಂದುವರೆಸಿ, ಉದ್ಯೋಗ ಹಿಡಿದು ಸ್ವಾವಲಂಬಿಯಾಗಿ ತನ್ನ ಹಾಗೂ ತನ್ನ ಮಕ್ಕಳ ಭವಿಷ್ಯವನ್ನು ರೂಪಿಸಿಕೊಂಡ ಕತೆ ಇದು.

ಬೆಳಗಿನ ಹೊತ್ತು ಪಕ್ಕದಲ್ಲಿ ಪುಟ್ಟ ಮಕ್ಕಳನ್ನು ಮಲಗಿಸಿಕೊಂಡು, ಹೊಟ್ಟೆಯೊಳಗೆ ಆರು ತಿಂಗಳ ಕೂಸನ್ನು ಹೊತ್ತು ನೆಮ್ಮದಿಯಾಗಿ ನಿದ್ರಿಸುತ್ತಿದ್ದ

ಅಂಬಾ ಎಚ್ಚರಗೊಳ್ಳುವುದು ತನ್ನ ಪತಿ ಶ್ರೀನಿವಾಸರ ದಾರುಣ ಮರಣದ ವಾರ್ತೆ ಹುಟ್ಟಿಸಿದ ಕೋಲಾಹಲದಿಂದ. ಉತ್ತಮ ಈಜು ಪಟುವಾಗಿದ್ದ ಆಕೆಯ ಪತಿ, ಕೆಂಪಾಂಬುಧಿ ಕೆರೆಗೆ ಈಜಲು ಹೋಗಿ, ಅದರ ಸುಳಿಯೊಳಗೆ ಮುಳುಗಿಹೋದ ಆಘಾತಕಾರಿ ಸುದ್ದಿಯನ್ನು ಬಸುರಿ ಹೆಣ್ಣು ಮಗಳಿಗೆ ತಿಳಿಸುವುದು ಹೇಗೆಂದು ಎಲ್ಲರೂ ಚಡಪಡಿಸುತ್ತಿರುತ್ತಾರೆ. ಸೂಕ್ಷ್ಮಮತಿಯಾದ ಅಂಬಾ ಆಗಬಾರದ ದುರಂತವೇನೋ ಜರುಗಿದೆ ಎಂದು ಗ್ರಹಿಸಿ, ತಲ್ಲಣವನ್ನು ಹತ್ತಿಕ್ಕಿಕೊಂಡು "ಆಗಿರುವ ದುರಂತವೇನೆಂದು ಹೇಳಿ, ತಡೆದುಕೊಳ್ಳುವೆ, ದಯವಿಟ್ಟು ದುಃಖಿಸಬೇಡಿ" ಎಂದು ತನ್ನ ತಂದೆಗೆ ಹೇಳುತ್ತಾಳೆ. ಸುದ್ದಿ ಕೇಳಿ ಸ್ತಬ್ಧಳಾಗುತ್ತಾಳೆ, ಕಾಲಡಿಯ ನೆಲವೇ ಕುಸಿದು ಹೋದಂತಾಗುತ್ತದೆ. ತಂದೆಯನ್ನು ಎಂದೂ ಕಾಣದೆಯೇ ಬೆಳೆಯಬೇಕಾದ ಹೊಟ್ಟೆಯೊಳಗಿನ ಮಗುವನ್ನು ನೆನೆದು ಜವಾಬ್ದಾರಿ ಜಾಗೃತವಾಗುತ್ತದೆ. ಕಣ್ಣೆದುರಿನ ಸಾವು, ಮುಂದಾಗಲಿರುವ ಹುಟ್ಟು ಎರಡರ ನಡುವೆ ನಿಂತ ಅಂಬಾಳಿಗೆ ಸಮತೋಲನ ಕಾಯ್ದುಕೊಳ್ಳದೆ ಬೇರೆ ದಾರಿಯೇ ಇಲ್ಲ.

ಕಟ್ಟಾ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ವಿಧವೆಯೊಬ್ಬಳ ಬದುಕು ಹೇಗಿರುತ್ತದೆ ಎಂಬುದನ್ನು ಹತ್ತಿರದಿಂದಲೇ ಕಂಡಿದ್ದರು. ಹಾಗೆಯೆ ತನ್ನ ಬದುಕು ಕತ್ತಲೆಯ ಕೂಪವಾಗುತ್ತದೆ ಎಂಬುದನ್ನು ನೆನೆದಾಗ, ಆಕೆಯ ಧೈರ್ಯವೆಲ್ಲ ಉಡುಗಿ ಹೋಗುತ್ತಿತ್ತು. ಹಾಗಾದಾಗಲೆಲ್ಲ, ಅವಳಿಗೆ ಭರವಸೆಯ ಕಿರಣವಾಗಿ ಕಾಣುತ್ತಿದ್ದುದು ಅವಳ ತಂದೆ ಕೃಷ್ಣರಾವ್. ಅವಳ ಭರವಸೆ ಸುಳ್ಳಾಗುವುದಿಲ್ಲ. ತಲೆ ಬೋಳಿಸಿಕೊಂಡು, ಕೆಂಪು ಸೀರೆಯೊಳಗೆ ನವೆದು ಹೋಗಬೇಕಾಗಿದ್ದ ಬದುಕಿಗೆ ಬಂಡೆಯಂತೆ ಆಸರೆಯಾಗುತ್ತಾರೆ ಅವಳ ತಂದೆ. ಅವರು ಬಂಡೆಯಂತೆ ನಿಲ್ಲಲು ಸ್ಫೂರ್ತಿಯಾಗಿದ್ದು ಅವಳೊಳಗಿದ್ದ ಛಲ, ಧೈರ್ಯ ಹಾಗೂ ಬುದ್ಧಿವಂತಿಕೆ.

ಮನೆಯಲ್ಲಿಯೇ ಪಾಠ ಹೇಳಿಸಿಕೊಂಡು ಅಂಬಾ SSLC ಪರೀಕ್ಷೆ ಪಾಸು ಮಾಡುತ್ತಾಳೆ. ತಾಯಿಯನ್ನು ಒಪ್ಪಿಸುವ ಸಾಹಸ ಮಾಡಿ ಮೈಸೂರಿನಲ್ಲಿ ಕಾಲೇಜು ಶಿಕ್ಷಣ ಮುಗಿಸುತ್ತಾಳೆ. ಮಹಿಳಾ ಹಾಸ್ಟೆಲ್ ಇಲ್ಲದ ಸಂದರ್ಭದಲ್ಲಿ ತಂದೆಯ ಸ್ನೇಹಿತರ ಸಹಕಾರದಿಂದ ಜಾಗದ ವ್ಯವಸ್ಥೆಯಾಗುತ್ತದೆ. ಮಗನನ್ನು ತಂದೆಯ ಮನೆಯಲ್ಲಿ ಬಿಟ್ಟು ಇನ್ನಿಬ್ಬರು ಹೆಣ್ಣು ಮಕ್ಕಳನ್ನು ತನ್ನೊಡನೆ ಮೈಸೂರಿಗೆ ಕರೆದೊಯ್ಯುತ್ತಾರೆ. ಕಾಲೇಜಿಗೆ ಹೋದಾಗ ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾರೆ. ವಿದ್ಯಾಭ್ಯಾಸ ಮುಗಿಸಿ ಶಾಲೆಯಲ್ಲಿ ಶಿಕ್ಷಕಿಯಾಗಿ ನೇಮಕವಾಗುತ್ತಾರೆ. ಉದ್ಯೋಗ ಆಕೆಗೆ ಆರ್ಥಿಕ ಸ್ವಾವಲಂಬನೆ ನೀಡುವುದರ ಜೊತೆಗೆ, ಮಾನಸಿಕ ನೆಮ್ಮದಿಯನ್ನೂ ನೀಡುತ್ತದೆ. ಬದುಕು ಒಂದು ಲಯಕ್ಕೆ ಬಂತೆಂದು ಸಮಾಧಾನ ಪಡುವ ಹೊತ್ತಿನಲ್ಲೆ ಆಕೆಯ ಇಬ್ಬರು ಹೆಣ್ಣುಮಕ್ಕಳು ಟೈಫಾಯಿಡ್ ಜ್ವರಕ್ಕೆ ತುತ್ತಾಗುತ್ತಾರೆ. ಸೂಕ್ತ ಔಷಧ ಆಗಿನ್ನೂ ಕಂಡುಹಿಡಿದಿರಲಿಲ್ಲವಾದ್ದರಿಂದ ಕಪಿಲ ಎಂಬ ಮಗಳು ತೀರಿಕೊಂಡು, ಸುಮಿತ್ರ ಎಂಬ ಮಗಳು ಬದುಕುಳಿಯುತ್ತಾಳೆ. ತನ್ನ ಹೊಟ್ಟೆಯ ಮಗು ತೀರಿಕೊಂಡ ದುಃಖ, ಬದುಕುಳಿದಿರುವ ಮಗಳನ್ನು ಜೋಪಾನವಾಗಿ ಆರೈಕೆ ಮಾಡಬೇಕಾದ ಜವಾಬ್ದಾರಿ. ಮತ್ತೆ ಬದುಕು-ಸಾವು ಒಟ್ಟೊಟ್ಟಿಗೆ ಎದುರು ನಿಂತಾಗ ದುಃಖ ನುಂಗಿಕೊಂಡು ಹಗಲು-ರಾತ್ರಿ ಮಗಳನ್ನು ಆರೈಕೆ ಮಾಡಿ ಚೇತರಿಸಿಕೊಳ್ಳುವಂತೆ ಮಾಡುತ್ತಾರೆ. ಮುಂದೆ ಸುಮಿತ್ರ ಲೋಯರ್ ಸೆಕೆಂಡರಿ ಪಾಸು ಮಾಡುವುದಲ್ಲದೆ, ಆಗಿನ ಕಾಲಕ್ಕೆ ಮದುವೆಯಾಗಬೇಕಾದ ಬ್ರಾಹ್ಮಣ ಹೆಣ್ಣುಮಕ್ಕಳು ಕಲಿಯಬೇಕಾಗಿದ್ದ ಸಕಲ ವಿದ್ಯೆಗಳಲ್ಲೂ ನಿಪುಣೆಯಾಗುತ್ತಾಳೆ. ಹದಿನಾಲ್ಕನೇ ವಯಸ್ಸಿಗೆ ವೆಂಕೋಬರಾವ್ ಎಂಬ ವರನೊಂದಿಗೆ ಮದುವೆಯಾಗುತ್ತದೆ. ಅವರಿಗೆ ಜನಿಸಿದ ನಾಲ್ವರು ಹೆಣ್ಣುಮಕ್ಕಳಲ್ಲಿ ಒಬ್ಬರಾದ ವಿಮಲ ಅವರೇ ಈ ಪುಸ್ತಕದ ಲೇಖಕಿ. ಮಗ ಬೆಂಗಳೂರಿನಲ್ಲಿ ಓದುತ್ತಿರುತ್ತಾನೆ. ಇಂತಹ ಸಮಯಾವಕಾಶವನ್ನು ಸೂಕ್ತವಾಗಿ ಬಳಸಿಕೊಂಡು ವೃತ್ತಿಯಲ್ಲಿ ಹೆಚ್ಚಿನದನ್ನು ಸಾಧಿಸಬೇಕೆಂಬ ಉದ್ದೇಶದಿಂದ B.T (Bachelor of Teaching) ಡಿಗ್ರಿ ಪಡೆಯಲು ದೂರದ ಮದ್ರಾಸಿಗೆ



ಹೋಗುತ್ತಾರೆ. ನಂತರ ಬೆಂಗಳೂರಿನ ಶಾಲೆಗೆ ಮುಖ್ಯೋಪಾಧ್ಯಾಯಿನಿ ಆಗಿ ಆಯ್ಕೆಯಾಗುತ್ತಾರೆ.

ಅಂಬಾ ಅವರ ಮುಂದಿನ ಬದುಕು ಹೆಚ್ಚಿನ ಏರಿಳಿತಗಳಿಲ್ಲದೆ ಸಾಗುತ್ತದೆ. ಆಕೆ ತನ್ನ ಬದುಕಿನಲ್ಲುಂಡ ಕಹಿ, ಅದನ್ನು ಎದುರಿಸಿಯೂ ಪಡೆದುಕೊಂಡ ವಿದ್ಯೆ, ಹುದ್ದೆ ಹಾಗೂ ಗಂಭೀರ ನಡೆ-ನುಡಿ, ಮನೆ ಹಾಗೂ ವೃತ್ತಿ ಎರಡನ್ನೂ ಅಚ್ಚುಕಟ್ಟಾಗಿ, ಸಮರ್ಥವಾಗಿ ನಿರ್ವಹಿಸುವ ರೀತಿ, ಕೌಟುಂಬಿಕ ವಲಯದ ಯಾರಿಗಾದರೂ ಸಂಕಷ್ಟದ ಸಮಯದಲ್ಲಿ ಆಸರೆಯಾಗಿ ನಿಲ್ಲುವುದು, ಹಣಕಾಸಿನ ವಿಷಯದಲ್ಲಿ ಅತ್ಯಂತ ಪ್ರಾಮಾಣಿಕರಾಗಿದ್ದುದು (ಖರ್ಚು ಮಾಡಿದ ಪ್ರತಿಯೊಂದು ಕಾಸಿನ ವಿವರಗಳನ್ನೊಳಗೊಂಡ ಅವರ ಲೆಕ್ಕದ ಪುಸ್ತಕ ಅಂದಿನ ಆರ್ಥಿಕ ಸ್ಥಿತಿಗೆ ಕನ್ನಡಿಯಾಗಬಲ್ಲದು), ಈ ಎಲ್ಲ ಗುಣಗಳಿಂದಾಗಿ ಆಕೆ ವಿಶೇಷವಾದ ಸ್ಥಾನವನ್ನು, ಗೌರವವನ್ನು ಪಡೆದುಕೊಳ್ಳುತ್ತಾರೆ. ಆಕೆಯೊಡನೆ ಇತರ ಹೆಂಗಸರು, ಗಂಡಸರೂ ಸಹ ಒಂದು ರೀತಿಯ ಭಯಮಿಶ್ರಿತ ಗೌರವಾದರಗಳೊಂದಿಗೆ ನಡೆದುಕೊಳ್ಳುತ್ತಾರೆ. ಮಕ್ಕಳಿಗೆ ವಿಶೇಷ ತಿನಿಸು ಮಾಡಿಕೊಡುವ, ಕತೆ ಹೇಳುವ, ಪ್ರೀತಿಯ ಅಜ್ಜಿ. ಆದರೆ ಸದರ ತೆಗೆದುಕೊಂಡು ಆಡುವಷ್ಟು ಸಲೀಸಿನ ವ್ಯಕ್ತಿಯಲ್ಲ.

ಸಾಮಾಜಿಕ ಸ್ಥಾನಮಾನ, ಆರ್ಥಿಕ ಭದ್ರತೆ, ಯಶಸ್ಸಿನ ವೃತ್ತಿಜೀವನ -ಇವೆಲ್ಲವನ್ನು ಸಾಧಿಸಿಕೊಂಡರೂ ಆಕೆಗೆ ಕೊನೆಯವರೆಗೂ ಕಾಡುವುದು ಒಳಗೆ ಉಳಿದುಕೊಂಡಿದ್ದ ಮಗನ ಕುರಿತ ನೋವು, ಚಿಂತೆ. ಅಂದು, ತನ್ನ ಬದುಕಿಗೊಂದು ನೆಲೆ ಕಂಡುಕೊಳ್ಳಲು ಹೆಚ್ಚಿನ ಶಿಕ್ಷಣವೊಂದೆ ದಾರಿ ಎಂದುಕೊಂಡಾಗ ಅನಿವಾರ್ಯವಾಗಿ ಆಕೆ ಸಣ್ಣ ವಯಸ್ಸಿನ ಮಗ ಗೋಪಾಲನನ್ನು ತನ್ನ ತಾಯಿ-ತಂದೆಯರ ಬಳಿ ಬಿಟ್ಟು ಹೋಗಬೇಕಾಯಿತು. ಅಜ್ಜ-ಅಜ್ಜಿ, ಇತರರು ಎಷ್ಟೇ ಅಕ್ಕರೆಯಿಂದ ನೋಡಿಕೊಂಡರೂ ಅವನು, ತಾಯಿ ದೂರ ಮಾಡಿದಳೆಂಬ ಭಾವದಿಂದ ಹೊರಬರಲಾರದೆ ಮಾನಸಿಕವಾಗಿ ನೊಂದು ಒಬ್ಬಂಟಿಯಾಗಿಬಿಡುತ್ತಾನೆ. ಆ ಮಾನಸಿಕ ಸ್ಥಿತಿಯಿಂದ ಎಂದೂ ಹೊರಬರಲಾರದೆ ತಾಯಿ ಎಷ್ಟೇ ಒತ್ತಾಯಿಸಿದರೂ ಮದುವೆಯಾಗದೆ ಉಳಿಯುತ್ತಾನೆ. ಮಗನ ಭವಿಷ್ಯದ ಚಿಂತೆ, ದೂರ ಮಾಡಿದೆನೆಂಬ ನೋವಿನೊಂದಿಗೆ ಅಂಬಾಬಾಯಿ ತೀರಿಕೊಳ್ಳುತ್ತಾರೆ. ಮನೆ ಹಾಗೂ ಉದ್ಯೋಗದ ಹೊಣೆಯ ಜೊತೆಗೆ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಹೆಂಗಸರು ಹೆಣಗಾಡುವುದು ಇಂದಿನ ವಾಸ್ತವವೂ ಆಗಿದೆ.

ತನ್ನ ಬದುಕು, ಅಸ್ತಿತ್ವವನ್ನು ರೂಪಿಸಿಕೊಳ್ಳಲು ಶಿಕ್ಷಣವನ್ನೇ ಆಧಾರ ಮಾಡಿಕೊಳ್ಳುವ ಅಂಬಾಬಾಯಿಯವರು ಅದಕ್ಕೆ ಅಡ್ಡಿಯಾಗುವ ಕಟ್ಟಾ ಬ್ರಾಹ್ಮಣ ಸಂಪ್ರದಾಯಗಳನ್ನು ಮುರಿಯುವ ಧೈರ್ಯ ತೋರುತ್ತಾರೆ. ಆದರೆ, ಆಹಾರ ಮತ್ತು ಜಾತಿಯ ವಿಷಯಕ್ಕೆ ಬಂದಾಗ ಆಕೆ ಬ್ರಾಹ್ಮಣ ಸಂಪ್ರದಾಯಕ್ಕೆ ನಿಷ್ಠಳು. ಮಡಿ–ಮೈಲಿಗೆ ವಿಷಯದಲ್ಲಿ ಆಕೆಯ ಬದ್ಧತೆ ಎಷ್ಟೆಂದರೆ, ಎಲ್ಲಿಗೇ ಹೋಗಲಿ ಮಡಿಯಲ್ಲೇ ಅಡುಗೆ ಮಾಡಿ ಊಟ ಮಾಡುವ ಅಭ್ಯಾಸ ಕೊನೆಯವರೆಗೂ ಬಿಡುವುದಿಲ್ಲ. ಹಾಸ್ಟೆಲ್‌ನಲ್ಲಿ ಬೇರೆಯವರು ಮಾಡುವುದನ್ನು ಊಟ ಮಾಡಬೇಕೆಂಬ ಕಾರಣಕ್ಕೆ ಮನೆ ಮಾಡಿಕೊಂಡು, ಅಡುಗೆಗೆ ಮಡಿ ಹೆಂಗಸನ್ನೇ ಇರಿಸಿಕೊಳ್ಳುತ್ತಾರೆ. ಮಕ್ಕಳು ಗೊತ್ತಿಲ್ಲದೆ ಪೂಜೆಗೆಂದು ಅಬ್ರಾಹ್ಮಣರನ್ನು ಮನೆಗೆ ಆಹ್ವಾನಿಸಿದಾಗ ಅವರನ್ನೂ ಊಟದ ಕೋಣೆಯ ಮೂಲಕ ಪೂಜಾಕೋಣೆಗೆ ಹೋಗುವುದನ್ನು ತಪ್ಪಿಸುವ ದಾರಿ ಹುಡುಕುತ್ತಾರೆ. ರೇಷ್ಮೆ ಸೀರೆಗೆ ಮೈಲಿಗೆ ಇಲ್ಲವೆಂಬ ಕಾರಣಕ್ಕೆ ಶಾಲೆಗೆ ಹೋಗಲು ನಿತ್ಯವೂ ರೇಷ್ಮೆ ಸೀರೆಯನ್ನೇ ಉಡುತ್ತಾರೆ. ಶಿಕ್ಷಣದಿಂದಲೇ ತನಗೊಂದು ಅಸ್ತಿತ್ವ, ಸ್ಥಾನ, ಮಾನ ಪಡೆದುಕೊಳ್ಳುವ ಅಂಬಾಬಾಯಿ ತನ್ನ ಮಗಳು ಹಾಗೂ ಮೊಮ್ಮಕ್ಕಳ ಹೆಚ್ಚಿನ ಶಿಕ್ಷಣ ಹಾಗೂ ಉದ್ಯೋಗ ಕುರಿತಂತೆ ಆಸಕ್ತಿ ವಹಿಸುವುದಿಲ್ಲ.

ಈ ಪ್ರಶ್ನೆಗಳು ಲೇಖಕಿಯನ್ನು ಕಾಡದೆ ಬಿಟ್ಟಿಲ್ಲ. ಆಕೆಯ ಗಂಭೀರ ವ್ಯಕ್ತಿತ್ವದಿಂದಾಗಿ ಕುಟುಂಬದ ಸದಸ್ಯರೂ ಸೇರಿದಂತೆ ಯಾರಿಗೇ ಆಗಲಿ ಆಕೆಯೊಂದಿಗೆ ನಿಕಟ ಸಂಬಂಧವಿರಿಸಿಕೊಳ್ಳುವುದು ದುಃಸಾಧ್ಯವಾಗಿತ್ತು. ಮನಸ್ಸಿನಲ್ಲಿ ಏಳುವ ಪ್ರಶ್ನೆಗಳನ್ನು ಕೇಳುವ ಸ್ವಾತಂತ್ರ್ಯ ಇದ್ದಂತಹ ಸಮಾನ ನೆಲೆಯ ಆಪ್ತ ಸಂಬಂಧ ಆಕೆಯೊಡನೆ ಇರಲಿಲ್ಲ. ಅದೇ ಈ ಪುಸ್ತಕದ ದೊಡ್ಡ ಕೊರತೆ ಎಂದು ವಿಮಲ ಅವರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಮಹಿಳೆಯರಿಗೆ ಶಿಕ್ಷಣವೆಂಬುದು ಆ ಕಾಲದಲ್ಲಿ ಸಾಂದರ್ಭಿಕ ಅನಿವಾರ್ಯವಷ್ಟೇ ಆಗಿತ್ತು. ಆಕೆ ಎದುರಿಸಿದಂತಹ ಸವಾಲುಗಳು ಮಗಳಿಗೆ, ಮೊಮ್ಮಕ್ಕಳಿಗೆ ಇಲ್ಲದಿದ್ದುದರಿಂದ ಅವರಿಗೆ ಹೆಚ್ಚಿನ ಶಿಕ್ಷಣ ಅಗತ್ಯವಿಲ್ಲವೆಂದು ಭಾವಿಸಿದ್ದಿರಬಹುದು. ಆಕೆ ಹೆಣ್ಣಾಗಿ, ತಾಯಿಯಾಗಿ, ತನ್ನ ಹಕ್ಕುಗಳಿಗಾಗಿ ಹೊಡೆದಾಡುವುದು, ಮಕ್ಕಳ ಸಲುವಾಗಿಯೇ ಹೊರತು ತನಗಾಗಿ ಅಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಪುಸ್ತಕ ಓದುವಾಗ ಅಂಬಾಬಾಯಿಯವರು ಎಂತಹ ಅಂತರ್ಮುಖಿ ಎಂಬುದು ಮನವರಿಕೆಯಾಗುತ್ತದೆ. ತನ್ನ ನೋವು, ಸಂಕಟ, ಆಸೆಗಳನ್ನು ಯಾರ ಬಳಿಯಾದರೂ ತೋಡಿಕೊಳ್ಳುವ ಒಂದೇ ಒಂದು ಘಟನೆಯೂ ಇಲ್ಲ. ಆಕೆಯನ್ನು ಕುರಿತು ಬರೆದಿರುವುದು ಸಹ ಆಕೆಯ ಕುರಿತಾಗಿ ಇತರರು ನೀಡಿದ ಅಭಿಪ್ರಾಯ ಹಾಗೂ ಮಿತಿಯನ್ನು ದಾಟದ ಒಡನಾಟದ ಅನುಭವವನ್ನು ಆಧರಿಸಿ. ತನ್ನ ಅಂತರಂಗವನ್ನು ಬಿಚ್ಚಿಡಲೇ ಬಾರದೆಂಬ ಹಠ ತೊಟ್ಟು, ಶಿಸ್ತಿನ ಸಿಪಾಯಿಯಾಗಿ, ಕರ್ತವ್ಯವೆಂಬಂತೆ ಬದುಕನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಬಚ್ಚಿಟ್ಟ ಅಂತರಂಗದೊಳಗೆ ಅಡಗಿದ್ದ ಸಹಜ ಮಿಡಿತಗಳಿಗೆ, ತಲ್ಲಣಗಳಿಗೆ ತೆರೆ ಹಾಕದೆ, ತಡೆಯೊಡ್ಡದೆ ಇದ್ದಿದ್ದರೆ ಏನೆಲ್ಲ ಪಲ್ಲಟಗಳಾಗುತ್ತಿದ್ದವೋ?

ಸಮಾನತೆ, ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಆಕೆಯದು ಸಂಪ್ರದಾಯಸ್ಥ ನಿಲುವು ಎಂಬುದು ನಿಜವೇ ಆದರೂ ಪುರುಷ ಶ್ರೇಷ್ಠತೆಯನ್ನೆ ಅತ್ಯುನ್ನತವೆಂದು ಪ್ರತಿಪಾದಿಸುವ ಬ್ರಾಹ್ಮಣ್ಯದ ಕರ್ಮಠ ಸಂಪ್ರದಾಯವಾದಿ ಪರಿಸರದಲ್ಲಿ ವಿಧವೆಯರು ಅನುಭವಿಸುವ ಕರಾಳ ಬದುಕನ್ನು ದಿಟ್ಟತನದಿಂದ ವಿರೋಧಿಸಿದ್ದು ಸಾಹಸವೇ.

ವಿಮಲ ಅವರು ತನ್ನ ಅಜ್ಜಿಯ ಬದುಕನ್ನು ದಾಖಲಿಸುವಾಗ ಆ ಕಾಲಘಟ್ಟದ ಅನೇಕ ಆಸಕ್ತಿದಾಯಕ ಅಂಶಗಳನ್ನು ದಾಖಲಿಸಿದ್ದಾರೆ. ಉದಾಹರಣೆಗೆ: ಅಂಬಾಬಾಯಿಯವರು ಹೆಚ್ಚಿನ ಶಿಕ್ಷಣಕ್ಕೆಂದು ಮೈಸೂರಿಗೆ ಹೋಗಬೇಕಾಗುತ್ತದೆ. ಹೆಣ್ಣುಮಕ್ಕಳಿಗೆ ವಸತಿ ವ್ಯವಸ್ಥೆ ಇರುವುದಿಲ್ಲ. ಆಗ ಮೈಸೂರಿನಲ್ಲಿದ್ದ ಅಂಬಾಬಾಯಿಯವರ ತಂದೆಯ ಸ್ನೇಹಿತರಾದ ನಂಜುಂಡಯ್ಯನವರು ಖಾಲಿ ಇದ್ದ ದೊಡ್ಡ ಬಂಗಲೆಯೊಂದನ್ನು ಖರೀದಿಸಿ ಅದನ್ನು ಮಹಿಳಾ ಹಾಸ್ಟೆಲ್ ಅಗಿ ಪರಿವರ್ತಿಸುತ್ತಾರೆ. ಅಂಬಾಬಾಯಿಯವರ ವಸತಿ ವ್ಯವಸ್ಥೆ ಸಮಸ್ಯೆ ಹೆಣ್ಣುಮಕ್ಕಳ ಹಾಸ್ಟೆಲ್ ಸ್ಥಾಪನೆಗೆ ಕಾರಣವಾಗುತ್ತದೆ. ಇವರ ಕುಟುಂಬಕ್ಕೆ ಸೇರಿದ ಅನಂತಸ್ವಾಮಿ ಎಂಬುವವರು ಅಮೇರಿಕದ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಸಾರ್ವಜನಿಕ ಆರೋಗ್ಯ ಕುರಿತು ಹೆಚ್ಚಿನ ಪರಿಣತಿ ಪಡೆದು ಬರುತ್ತಾರೆ. ಇವರು ಭಾರತದಲ್ಲಿ ಮಲೇರಿಯಾ ಸಂಶೋಧನೆ ಮತ್ತು ನಿಯಂತ್ರಣ ಕುರಿತು ಕೆಲಸ ಪ್ರಾರಂಭಿಸಿದ ಮೊದಲಿಗರು. ಮಲೇರಿಯಾಕ್ಕೆ ಕಾರಣವಾದ ಅನಾಫಿಲಿಸ್ ಸೊಳ್ಳೆಯನ್ನು ತಿನ್ನುವ ಜೆಮ್‌ಬೋಸಿಯ ಎಂಬ ಮೀನಿನ ತಳಿಯನ್ನು ಭಾರತಕ್ಕೆ ಪರಿಚಯಿಸಿದ ಖ್ಯಾತಿ ಅವರದು. ಇಂತಹ ಆಸಕ್ತಿದಾಯಕ ವಿಷಯಗಳ ಜೊತೆಗೆ ಅಂದಿನ ಕಾಲದ ಬೆಂಗಳೂರು, ತುಮಕೂರಿನ ಚಿತ್ರಗಳು ಕಣ್ಣಿಗೆ ಕಟ್ಟುತ್ತವೆ.

ಪುಸ್ತಕದ ಭಾಷೆ ಸರಳವಾಗಿದ್ದು ಸುಲಲಿತವಾಗಿ ಓದಿಸಿಕೊಂಡು ಹೋಗುತ್ತದೆ. ಪುಸ್ತಕವನ್ನು ಹಳೆಯ ಫೋಟೋಗಳು, ಸುಂದರ ಚಿತ್ರಗಳು, ಅಚ್ಚುಕಟ್ಟಾದ ವಿನ್ಯಾಸದೊಂದಿಗೆ ತಪ್ಪುಗಳಿಲ್ಲದೆ ಚೆನ್ನಾಗಿ ಮುದ್ರಿಸಲಾಗಿದೆ. ಇದರ ಹಿಂದಿರುವುದು ಗೆಳತಿಯರಾದ ಲಕ್ಷ್ಮಿ, ವಾಣಿ, ನೀಲಾಂಜನರ ಶ್ರಮ. ಪುಸ್ತಕ ಮಾರಿದ ದುಡ್ಡನ್ನು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಮೀಸಲಿಡಬೇಕೆಂಬುದು ವಿಮಲಾರವರ ಆಶಯವಾಗಿತ್ತು. ಈ ಇಡೀ ಪ್ರಕ್ರಿಯೆಯ ಹಿಂದೆ ಇರುವ ಸ್ತ್ರೀ ಸಮುದಾಯದ ಶ್ರಮವೇ ಒಂದು ಸಂಕೇತವಾಗಿ ಬಿಡುತ್ತದೆ! ❑

ಅಂಬಾಬಾಯಿಯವರು ಆರ್ಯ ಬಾಲಿಕಾ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದಾಗ ಶಾಲೆಯ ಮಕ್ಕಳನ್ನು ಬ್ಯಾಡ್‌ಮಿಂಟನ್ ಟೂರ್ನ್‌ಮೆಂಟ್‌ನ ಸ್ಪರ್ಧೆಯಲ್ಲಿ ಭಾಗವಹಿಸಲು ಕರೆದೊಯ್ಯಬೇಕಾಗುತ್ತದೆ. ಹೋಗಿ ಬಂದ ಮೇಲೆ ಟೂರ್ನ್‌ಮೆಂಟ್ ನಡೆದ ಶಾಲೆಯ ಮುಖ್ಯೋಪಾಧ್ಯಾಯಿನಿ ಯಿಂದ ಪತ್ರ ಬರುತ್ತದೆ. "ಅಂಬಾಬಾಯಿಯವರು ಲೆಕ್ಕಪತ್ರ ಸರಿಯಾಗಿ ಕೊಟ್ಟಿಲ್ಲ. ಒಂದು ರೂಪಾಯಿ ವ್ಯತ್ಯಾಸ ಬಂದಿದೆ. ಆ ಹಣ ಆಕೆ ಕೊಡಬೇಕು, ಇಲ್ಲವಾದರೆ...." ಈ ಪತ್ರ ಅತಿ ಶಿಸ್ತಿನ ಅಂಬಾಬಾಯಿಯವರಿಗೆ ತುಂಬ ಮುಜುಗರ ತರುತ್ತದೆ. ಆಕೆ ೩೦-೯-೧೯೩೯ರ ತಾರೀಖಿನಂದು ಉತ್ತರ ಬರೆಯುತ್ತಾರೆ: "ಎಲ್ಲ ಲೆಕ್ಕಪತ್ರವನ್ನೂ ಓಚರ್ ಸಹಿತ ಸರಿಯಾಗೇ ಕೊಟ್ಟಿದೆ. ಒಂದು ರೂಪಾಯಿಗೆ ಓಚರ್ ಲಭ್ಯವಿಲ್ಲ, ಏಕೆಂದರೆ ಗುರುತು ಮಾಡಲು ಸುಣ್ಣದಪುಡಿ, ಪಾಟ್‌ಗಳು ಮತ್ತು ಹೊಸ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಕಂಬಗಳಿಗೆ ಸಿಗಿಸಲು ಬಳಸಿದ ಹುಕ್‌ಗಳಿಗೆ ಒಂದು ರೂಪಾಯಿ ಖರ್ಚಾಗಿದೆ. ಇವನ್ನೆಲ್ಲ ಕೊಂಡುತಂದ ನಂಜುಂಡ ಮತ್ತು ಚಿಕ್ಕ ಹನುಮಂತರನ್ನು ಕರೆದು ಓಚರ್‌ಗಳ ನಕಲು ಪ್ರತಿಯನ್ನು ತರಿಸಿಕೊಳ್ಳಬಹುದು. ಟೂರ್ನಮೆಂಟ್ ಆಗಲೆ ಪ್ರಾರಂಭವಾಗಿದ್ದುದರಿಂದ ಮತ್ತು ಹುಡುಗಿಯರು ಹೊಸದಕ್ಕಾಗಿ ಒತ್ತಾಯಿಸುತ್ತಿದ್ದುದರಿಂದ ಇವುಗಳನ್ನು ಸ್ಟಾಕ್ ಪುಸ್ತಕದಲ್ಲಿ ತೆಗೆದುಕೊಳ್ಳುವುದನ್ನು ಗುಮಾಸ್ತರು ಬಹುಶಃ ಬಿಟ್ಟುಬಿಟ್ಟಿರಬಹುದು. ಈ ಹಣ ಹುಡುಗಿಯರಿಗಾಗಿಯೇ ಖರ್ಚಾಗಿದೆ. ಆದರೂ ಇದನ್ನು ಪಾವತಿಸಲೇಬೇಕೆಂದರೆ ನಾನೇ ಪಾವತಿಸುತ್ತೇನೆ. ಈ ವಿಷಯವನ್ನು ದಯವಿಟ್ಟು ಡೆಪ್ಯುಟಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್‌ರವರ ಗಮನಕ್ಕೆ ತರಬೇಕಾಗಿ ಪ್ರಾರ್ಥಿಸುವೆ." ಇದು ಆಕೆಯ ಪ್ರಾಮಾಣಿಕತೆ–ಶಿಸ್ತಿಗೊಂದು ಪುಟ್ಟ ಉದಾಹರಣೆ.

ರೇಷಿಮೆಯ ಹುಳು

ಎಸ್. ಮಾಲತಿ, ಸಾಗರ



ಜಮೀನ್ದಾರನ ಮಗಳು
ತುಂಬು ಸಂಸಾರ
ಅಚ್ಚಬಿಳಿ ಬಣ್ಣದ ಸುಂದರಿ
ಹೆಮ್ಮೆ ಅಪಾರ
ತಿಂದುಂಡು ಬೆಳೆದಳು
ಕನಸುಗಳ ಕಂಡಳು
ಬುದ್ಧಿ ಬಲಿಯುವ ಮೊದಲೇ
ಕೊರಳಿಗೆ ಬದ್ದಿತ್ತು ತಾಳಿ
ಕಟ್ಟಿದವನೋ...
ಸುರಸುಂದರ
ಯೌವನದ ಮದದೊಳಗೆ
ಕಟ್ಟಿತ್ತು ಗರ್ಭ
ಒಬ್ಬನೇ ಒಬ್ಬ ಮಗ
ಮನ್ಮಥನ ರೂಪ
ಅಚ್ಚುಕಟ್ಟಿನ ಮನೆ
ಸುಂದರ ಕಾವ್ಯ

ಎಷ್ಟು ಸುಂದರವಿದೆ
ನಾ ಬರೆದ ಚಿತ್ರ
ಅದರಾಳದಲ್ಲಿವೆ
ಅದೆಷ್ಟೋ ವಿಚಿತ್ರ

ಅಪ್ಪನಾಸ್ತಿಯ ಬಳಕೆ
ದುಂದುಗಾರ ಗಂಡ
ಕಾರು, ಬೈಕು, ಸಿಗಾರು
ಕುಡಿತದ ಜೋರು
ತುಟಿಯಂಚಿನಲಿ ಮಾತ್ರ
ಮೆಲುನಗೆಯ ಮಾತು
ಕೆಲಸದಾಳಿಗೆ ಮಾತ್ರ
ಹೊಡೆತಗಳ ಜೋರು
ಕಾರುಬಾರಿನ ಉತ್ತುಂಗ
ವ್ಯಾಪಾರ ಕುಸಿದಿತ್ತು
ಭಾರೀ ಮುಖಭಂಗ
ತೂರಾಡುತ್ತ ಮನೆಗೆ ಬಂದ
ಹೆಂಡತಿಯ ಹಿಡಿದು

ಮುಷ್ಟಿ ಬಿಗಿಯುತ್ತ
ಕೆನ್ನೆಗೆ ಬಡಿದ
ದೇವರ ಮನೆ ಕಿತ್ತೆಸೆದು
ಮೀನಿನ ಸಾರು ಪ್ರೋಕ್ಷಿಸಿದ
ದೀಪದ ಕಂಭ ಹಿಡಿದು
ಅವಳ ತಲೆಗೆ ಬೀಸಿದ

ಇದು ಒಂದು ಸಲವಲ್ಲ
ಸತತವಾಗಿ ಹನ್ನೆರಡು ವರ್ಷ
ಎಲ್ಲಿದೆ ಅವಳ ಬಾಳಲಿ ಹರ್ಷ?
ಹುಡುಕಿದಳು ಬಾಳ ಅರ್ಥ

ಗಂಡನ ಸೇವೆಗೆ ಮಾತ್ರ ಚ್ಯುತಿಯಿಲ್ಲ
ಅವ ರಾಡಿ ಮಾಡಿದ ಮನೆ ತೊಳೆದು
ತೆಗೆದೆಸೆದ ವಸ್ತುಗಳ ಮತ್ತೆ ಜೋಡಿಸಿ
ದೇವರ ಮನೆ ಮತ್ತೆ ಕೂಡಿಸಿ
ತನ್ನ ತಲೆಗೆಸೆದ ದೀಪದ ಕಂಭದಲಿ
ಮತ್ತೆ ದೀಪ ಹಚ್ಚಿಡುತ್ತಾಳೆ

ತಲೆಯಲ್ಲಿ ಸುರಿಯುವ ರಕ್ತ
ಅರಿಸಿನ ಮೆತ್ತಿಕೊಳ್ಳುತ್ತಾಳೆ
ಕುಡಿದು ಮಲಗುವ ಗಂಡ
ಏಳುತ್ತಾನೆ ಮಧ್ಯಾಹ್ನ ಹನ್ನೆರಡಕ್ಕೆ
ಬಿಸಿಬಿಸಿ ತಿಂಡಿ ಸ್ನಾನಕ್ಕೆ ನೀರು
ಮಡಿಯಾದ ಬಟ್ಟೆ
ದಯಾಬಿಟೀಸಿಗೆ ಮಾತ್ರೆ
ಎಲ್ಲ ಜೋಡಿಸಿ ಇಟ್ಟು
ಭರ ಭರ ಗುಡಿಸುತ್ತಾಳೆ
ಮನೆಯಂಗಳ
ಪೊರೆಯುತ್ತಾಳೆ ಗಿಡಗಳ

ಒಳಗೇ ಬೆಳೆಯುತ್ತಿದೆ
ಸೇಡಿನ ಕಿಡಿ
ಒಂದು ದಿನ ಅವಳನ್ನೇ
ಮುಗಿಸಲಾರದೆ ಅದು?
ಸಿಡಿದು ಹೊರಬರುವ
ತಾಕತ್ತಿಲ್ಲ ಅವಳಲಿ
ಹೊಡೆತಗಳ ಪೆಟ್ಟಿಗೆ
ದೇವತೆ ರೂಪಗೊಳ್ಳುತ್ತಿಲ್ಲ.

ಹೆಣ್ಣೇ ನೀನು ಬಂಧಿ!

ಮೈರೆ ಅವನ ಕುಣಿತದ ಭಂಗಿ, ಗತ್ತು, ಹಾಸ್ಯಗಳನ್ನು ಮನದಲ್ಲಿ ತಾಳ ಹಾಕುತ್ತಾ ಅನುಭವಿಸುತ್ತಿದ್ದಳು. ತಾನೂ ಕುಣಿಯಬೇಕೆಂಬ ಹಂಬಲ. ಅಮ್ಮನನ್ನು 'ಹೆಂಗಸರು ಯಾಕೆ ಭೂತ ಕಟ್ಟುವುದಿಲ್ಲ? ಗಂಡಸರೇ ಏಕೆ ಭೂತ ಕಟ್ಟುವುದು? ಹೆಂಗಸರೇಕೆ ಭೂತ ಕಟ್ಟಿ ಹೋಗಬಾರದು? ಭೂತಗಳಿಗೆ ಹೆಂಗಸರೆಂದರೇಕೆ ದ್ವೇಷ?......" ಎಂದು ಕೇಳಿದ್ದಳು. 'ಅದೆಲ್ಲ ಹಿರಿಯರು ಮಾಡಿದ ಸಂಪ್ರದಾಯ. ಕಟ್ಟು... ಭೂತದ ದೃಷ್ಟಿ ಬಿದ್ದರೆ ಹೆಣ್ಣುಗಳು ಹಾಳಾಗುತ್ತಾರೆ, ರಕ್ತ ಕಾರುತ್ತದೆ. ಬಾವಿಗೆ ಬೀಳುತ್ತಾರೆ...." ಅಂದಿದ್ದಳು.

ವೀರಪ್ಪ ಮೊಯಿಲಿ, *('ತಂಬರೆ' ಕಾದಂಬರಿಯಿಂದ)*

ನೀವೂ ಓದಿ

ಜೀವನ ಪ್ರೀತಿಯ 'ಊರ ಒಳಗಣ ಬಯಲು'

● ಡಾ. ಚಂದ್ರಮತಿ ಸೋಂದಾ

'ಊರ ಒಳಗಣ ಬಯಲು' ಡಾ. ವಿನಯಾ ಅವರ ಹನ್ನೊಂದು ಕತೆಗಳನ್ನೊಳಗೊಂಡ ಸಂಕಲನ. ಇಲ್ಲಿನ ಹೆಚ್ಚಿನ ಕತೆಗಳಲ್ಲಿ ಮಹಿಳೆಯ ಬದುಕು ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಅವರೆಲ್ಲ ಹೆಚ್ಚು ಶಿಕ್ಷಣ ಪಡೆಯದ ಅಥವಾ ಅಶಿಕ್ಷಿತ ಗ್ರಾಮೀಣ ಮಹಿಳೆಯರಾಗಿದ್ದು ಅವರು ದುಡಿಮೆಗೆ ತಮ್ಮನ್ನು ತೆತ್ತುಕೊಂಡವರು; ಬದುಕಿನ ಜಂಜಡಗಳಿಗೆ ಹೆದರಿ ಪಲಾಯನ ಮಾಡದೆ, ಜೀವನ ಪ್ರೀತಿಯನ್ನು, ಲವಲವಿಕೆಯನ್ನು ಉಳಿಸಿಕೊಂಡು ಬಾಳು ಸವೆಸಿದವರು.

ಮೊದಲನೆಯ ಕತೆ 'ಒಂದು ಖಾಸಗಿ ಪತ್ರ'ದ ಘಟನೆ ಹೆಣ್ಣುಮಕ್ಕಳು ಒಂದಿಲ್ಲೊಂದು ರೀತಿಯಲ್ಲಿ ಎದುರಿಸುತ್ತಿರುವ ಸನ್ನಿವೇಶವಾಗಿದ್ದು ಆಪ್ತವೆನಿಸುತ್ತದೆ. ಮುನ್ನುಡಿಯಲ್ಲಿ ನೇಮಿಚಂದ್ರ ಅವರು ಹೇಳುವಂತೆ 'ಅರೆ, ಇದು ನಾನು ಬರೆಯಬೇಕಿದ್ದ ಕತೆ' ಎನಿಸುವಂತೆ ನಮ್ಮೊಳಗನ್ನು ಬಿಚ್ಚಿಡುತ್ತದೆ. ತಾನು ಇಂಥ ಹುಡುಗಿಯ ಪ್ರೇಮಿ ಎನ್ನುವುದು ಯುವಕನಿಗೆ ಒಂದು ತಮಾಷೆಯ ಸಂಗತಿ ಇರಬಹುದು, 'ಗಂಡಸುತನ'ದ ಅಹಮಿಕೆಯ ಸಂಕೇತವೂ ಇರಬಹುದು. ಪುರುಷನ ಇಂಥ ನಡವಳಿಕೆ ಮಹಿಳೆಯನ್ನು ಎಂಥ ಇಕ್ಕಟ್ಟಿಗೆ ತಳ್ಳುತ್ತದೆ ಎನ್ನುವುದನ್ನು ಕತೆ ಎಳೆಯೆಳೆಯಾಗಿ ಬಿಡಿಸಿಡುತ್ತದೆ. ಯೌವನದಲ್ಲಿ ಸಮಾಜ, ಕುಟುಂಬಗಳ ಕಣ್ ಪರಿಧಿಯೊಳಗೆ ವ್ಯವಹರಿಸುವ ಮಹಿಳೆ ವ್ಯಕ್ತಿತ್ವ ಮಾಗುತ್ತ ಬಂದಂತೆ ತನ್ನ 'ಒಳಗ'ನ್ನು ಮುಲಾಜಿಲ್ಲದೆ ಅನಾವರಣಗೊಳಿಸಬಲ್ಲ ಸಾಧ್ಯತೆಯ ಒಂದು 'ಮಾದರಿ'ಯಾಗಿ ಕತೆ ನಿಲ್ಲುತ್ತದೆ. ಮಗಳು ತಪ್ಪು ಮಾಡಿದ್ದಾಳೆಯೋ ಇಲ್ಲವೋ ಎನ್ನುವುದರ ಬಗೆಗೆ ತುಸುವೂ ಚಿಂತಿಸದೆ, ಅವಳ ಅಮ್ಮ ಬಿಸಿ ಸಾರನ್ನು ಅವಳ ತೊಡೆಯ ಮೇಲೆ ಸುರಿಯುವ ಸಾಂಕೇತಿಕತೆ ಅರ್ಥಪೂರ್ಣ. ತೆರೆದು ತೋರಿಸಲಾಗದ ದೇಹದ ಭಾಗದಂತೆ ಅವಳ ನೋವೂ ಕೂಡ.

ಹಳ್ಳಿಯ ಬದುಕಿನಲ್ಲಿ ಒಂದು ಮನೆಯಲ್ಲಿ ನಡೆಯುವ ಘಟನೆ ಕೇವಲ ಆ ಮನೆಗಷ್ಟೆ ಸೀಮಿತವಲ್ಲ ಎನ್ನುವುದನ್ನು 'ಊರ ಒಳಗಣ ಬಯಲು' ಕತೆ ಅನಾವರಣಗೊಳಿಸುವ ರೀತಿ ವಿಶಿಷ್ಟವಾದುದು. ನೆನಪು ವರ್ತಮಾನಗಳ ನಡುವೆ ಕತೆಯ ಮುಖ್ಯ ಪಾತ್ರವಾದ ಸುಧಾಕರನ ಬದುಕನ್ನು ಕತೆ ಕಾಣಿಸುತ್ತದೆ. ಕೋಮುವಾದಿಗಳ ಕುಮ್ಮಕ್ಕಿನಿಂದಾಗಿ ಊರಲ್ಲಿ ಕೋಮುಗಲಭೆ ನಡೆದಾಗ ಅದರಲ್ಲಿ ಭಾಗಿಯಾಗಿದ್ದ ಸುಧಾಕರ ಬದುಕಿನ ಅಗತ್ಯದ ಹಿನ್ನೆಲೆಯಲ್ಲಿ ಮದುವೆಯಾಗುವುದು ಅನ್ಯ ಧರ್ಮೀಯಳನ್ನು. ಹೆತ್ತ ತಂದೆಯೇ ಮಗನ ಬರವನ್ನು ನಿರಾಕರಿಸಿದರೂ ಸುಧಾಕರ ಊರಿಗೆ ಬರಲಿ ಎನ್ನುವ ಆಸೆ ಇತರರಿಗೆ. ಹೊರಗಿನ ನಡವಳಿಕೆಗೂ ವೈಯಕ್ತಿಕ ಸಂಬಂಧದ ಸೆಳೆತಕ್ಕೂ ಇರುವ ಭಿನ್ನತೆಯನ್ನು ಸ್ಪರ್ಶಿಸಲು ಕತೆ ಪ್ರಯತ್ನಿಸುತ್ತದೆ. ಇವೆರಡೂ ಕತೆಗಳಲ್ಲಿ ವೈಯಕ್ತಿಕ ಸಂಬಂಧದ ಪ್ರಸ್ತಾಪ ಪುನರಾವರ್ತನಗೊಳ್ಳುತ್ತದೆ. ಮೊದಲನೆಯ ಕತೆಯಲ್ಲಿ ಪತ್ರ ಬರೆಯುವ ನಾಯಕಿ ಆತನ ಮಗಳ ವಯಸ್ಸನ್ನು ನೆನಪಿಸುತ್ತಿದ್ದರೆ, ಎರಡನೆಯದರಲ್ಲಿ 'ಭಯ್ಯಾ' ಎನ್ನುವ ಪದ ಸುಧಾಕರನನ್ನು ಕಾಡುತ್ತದೆ.


'ಕಡೆತನಕ ಕಾಯೊ' ಕತೆ ಗ್ರಾಮೀಣ ಬದುಕು ನಗರದ ಬದುಕಿಗಿಂತ ಕೆಲಮಟ್ಟಿಗೆ ಸುರಕ್ಷಿತ ಎನ್ನುವ ಭಾವನೆಯನ್ನು ಮೂಡಿಸುತ್ತದೆ. ಬದುಕನ್ನು ಬೆನ್ನಿಗೆ ಕಟ್ಟಿಕೊಂಡವಳಂತೆ, ಹಿರಿಯರನ್ನು ಆರೈಕೆ ಮಾಡುವ, ಗಂಡನನ್ನು ಸಂಬಾಳಿಸುವ, ಮಗಳ ಭವಿತವ್ಯಕ್ಕಾಗಿ ಸದಾ ತುಡಿಯುವ ಗಂಗಕ್ಕ ದುಡಿಮೆಯನ್ನೇ ಹಾಸಿ, ಹೊದ್ದು ಬದುಕಿದವಳು. ಅವಳ ಗಂಡ ಸತ್ತಾಗಿನ ಸಂದರ್ಭ ಹೀಗಿದೆ: 'ಗಂಗಕ್ಕಗೆ ಕೂತು ಅಳಲು ಮತ್ತೆ ಪುರುಸೊತ್ತೆಂಬುದು ಸಿಗಲಿಲ್ಲ. ಹಿತ್ತಲ ಮರಗಳ ಬುಡ ಹೂರಿಸಿ, ಬ್ಬುಟ್ಟಿ ಬುಟ್ಟಿ ಹಣ್ಣು ಕೊಯ್ದು ಬುಟ್ಟಿತುಂಬಿ ಜಾಂಬಳ, ಸೀತಾಫಲ, ಹಲಸುಗಳನ್ನು ಶ್ರೀಕಾಂತನ ಅಂಗಡೀಲಿಟ್ಟಳು. ಬಾಳೆಕಾಯಿ, ಹಲಸಿನಕಾಯಿ ಹುರಿದು ಯಾರ್‍ಯಾರದೋ ಕೈಕಾಲಿಡಿದು ಗೋಕರ್ಣದ ಕಮಲೆ ಅಂಗಡೀಲಿಟ್ಟು ಕಾಸುಕೊಂಡಳು....... ಜೋಗಿ ಗಾಂವಕರನ ಸೊಸಿ ಅನ್ನೋದನ್ನ ನಿವಾಳಿಸಿ ಒಗೆದು 'ಕರಿಯಮ್ಮ' ಅನ್ನೊ ಕೂಸಿನ ಅವ್ವ ಮಾತ್ರ ಅಂತ ಎದಿಯೊಡ್ಡಿ ನಡೆದಳು'. ಹಾಗೆಂದು ಅವಳಿಗೆ ಗಂಡನ ಸಾವು ತನ್ನ ಬದುಕಿನಲ್ಲಿ ಅರಕೆ ಎನಿಸಲಿಲ್ಲ ಅಂತಲ್ಲ, 'ಗಂಡ ಎಂಬವನೊಬ್ಬ ಬೆನ್ನಿಗಿದ್ದ ಚಂದ ಈ ಪರಪಂಚದಲ್ಲಿ ಮತ್ತಾವುದೂ ಇಲ್ಲ ಅಂತ ಹಲುಬಿದಳು.' ಅವನಿಂದ ಸಹಾಯ, ಭರವಸೆ ದೊರಕುತ್ತದೆ ಎನ್ನುವುದಕ್ಕಿಂತ ಲೋಕ ತನ್ನನ್ನು ಗ್ರಹಿಸುವ ರೀತಿ ಭಿನ್ನವಾಗಿರುತ್ತದೆ ಎನ್ನುವ ಅಂಶವೇ ಇಲ್ಲಿ ಮುಖ್ಯವೆನಿಸುತ್ತದೆ.

ತಾಯಿಯ ಗಟ್ಟಿತನವನ್ನು ಮೈಗೂಡಿಸಿಕೊಂಡಿದ್ದ ಕರಿಯಮ್ಮ 'ಕರಿಷ್ಮಾ' ಆಗಿ ಬದುಕನ್ನು ಅರ್ಥಪೂರ್ಣ ಮಾಡಿಕೊಂಡರೂ ಗಂಡನ ಸಂಶಯದ ಕೀಟ ಅವಳ ಬದುಕನ್ನು ಹೊಸಕಿ ಹಾಕುತ್ತದೆ. 'ಎಲ್ಲ ಸಂಬಂಧಗಳಿಗೂ ಹೆಸರು ಕೊಡಲು ಹೋದೆನೇ ನಾನು?' ಎನ್ನುವ ಪ್ರಶ್ನೆ ಗಂಡನನ್ನು ಕಾಡುತ್ತದೆ. ಗಂಗಕ್ಕನಿಗೆ ಹಳ್ಳಿಯಲ್ಲಿ ಅವಳದೇ ಆದ 'ಐಡೆಂಟಿಟಿ' ಇತ್ತು. ಯಾರೂ ಸ್ಪರ್ಧಿಗಳಿರಲಿಲ್ಲ. ಆದರೆ ಮಾನವೀಯ ಸಂಬಂಧವನ್ನು ಅರ್ಥಮಾಡಿಕೊಳ್ಳುವಲ್ಲಿ ಸೋಲುವ ಆಧುನಿಕ ಬದುಕು ಕರಿಷ್ಮಾಳ ನಡವಳಿಕೆಗೆ ಭಾಷ್ಯ ಬರೆಯ ಹೊರಟಿದ್ದೇ ಅವಳ ಸಾವಿಗೆ ಕಾರಣ ಎನ್ನುವ ನಿಲುವನ್ನು ಕತೆ ಪ್ರತಿಪಾದಿಸುತ್ತದೆ.

'ಎಲ್ಲ ಆರಾಮ?' ಕತೆಯ ಪ್ರಶ್ನಾರ್ಥಕದಲ್ಲಿಯೇ ಅದರ ಅರ್ಥ ಅಡಗಿದೆ. ಮೇಲುನೋಟಕ್ಕೆ ಕಾಣುವುದಕ್ಕೂ ಒಳಗಿನ ಸಂದರ್ಭಕ್ಕೂ ಇರುವ ವ್ಯತ್ಯಾಸವನ್ನು ಕತೆ ತೆರೆದಿಡುತ್ತದೆ. ವಿನಯಾ ಅವರ ಎಲ್ಲ ಕತೆಗಳಲ್ಲಿ ಭೂತ-ವರ್ತಮಾನಗಳ ಹೋಲಿಕೆ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಇದು ಆಕಸ್ಮಿಕ ಎನಿಸುವುದಿಲ್ಲ. ಬದುಕಿನ ಬದಲಾವಣೆಯನ್ನು ಲೇಖಕಿ ಗುರುತಿಸುವ ಒಂದು ವಿನ್ಯಾಸವಾಗಿ ಇದು ಕಂಡುಬರುತ್ತದೆ. ವಿನಯಾ ಅವರು ಚಿತ್ರಿಸುವ ಗಂಗಕ್ಕ, ಅಂಜನಕ್ಕ ಮುಂತಾದವರು ಕಾರಂತರ ಕೃತಿಗಳ ಸ್ತ್ರೀಪಾತ್ರಗಳನ್ನು ನೆನಪಿಸುತ್ತಾರೆ. ತಾನು ಟೀಚರ್ ಕೆಲಸ ಮಾಡುತ್ತಿದ್ದರೂ ತನಗೆ ಸಾವಿತ್ರಿ ಟೀಚರಂತೆ ಯಾವ ವಿದ್ಯಾರ್ಥಿಯ ಬಗೆಗೂ ಆತ್ಮೀಯತೆ ಬೆಳೆಯದುದರ ಬಗೆಗೆ ಸುಜಾತಳಿಗೆ ವಿಷಾದವೆನಿಸುತ್ತದೆ. ಸುಜಾತಳನ್ನು ಹಿಂದಿನ

ಆತ್ಮೀಯತೆಯಿಂದಲೇ ಕಾಣುವ ಸಾವಿತ್ರಿ ಟೀಚರ್ ಬದಲಾದ ಬದುಕಿನ ಅವಸರಕ್ಕೆ ಒಗ್ಗಿದವರಂತೆ ಗೋಚರಿಸುತ್ತಾರೆ. ತನ್ನ ಬದುಕಿನ ಲವಲವಿಕೆಗೆ ಕಾರಣರಾಗಿದ್ದ ಟೀಚರ್ ಬದುಕು ವಿಸ್ಮಯ ಎನಿಸುತ್ತದೆ. ಸಾವಿತ್ರಿ ಟೀಚರ್ ಅವರನ್ನು ಕಂಡಾಗ ತಾನು ವಿದ್ಯಾರ್ಥಿ ದೆಸೆಯಲ್ಲಿ ನೃತ್ಯ ಮಾಡುತ್ತಿದ್ದುದು ನೆನಪಾದರೂ ಆ ವಿಷಯವನ್ನು ಮನೆಯಲ್ಲಿ ತಿಳಿಸಲು ಹಿಂಜರಿಯುವ ಬದುಕಿನ ವಾಸ್ತವವನ್ನು ಆರಾಮವೆಂದು ಗ್ರಹಿಸಬೇಕೇ? ಎನ್ನುವ ಪ್ರಶ್ನೆಯನ್ನು ಕತೆ ಎತ್ತುತ್ತದೆ.

'ನೋಯದವರೆತ್ತ ಬಲ್ಲರೊ' ಕತೆಯ ಅಂಜನಕ್ಕ ಗಂಗಕ್ಕನಂತೆಯೇ ದುಡಿಮೆಯನ್ನು ಉಸಿರಾಗಿಸಿಕೊಂಡವಳು. ಹೆತ್ತವರಿಗೆ ಹೆಣ್ಣುಮಕ್ಕಳ ದುಡಿಮೆಯ ಬಗೆಗಿರುವ ಕಾಳಜಿ ಸ್ವಂತ ಬದುಕಿನ ಬಗ್ಗೆ ಕಾಣಿಸುವುದಿಲ್ಲ. ಅಂಜನಕ್ಕನ ಬಗೆಗಿನ ವಿವರಗಳಲ್ಲಿ ಒಂದು ರೀತಿಯ ತಾದಾತ್ಮ್ಯ



ಊರ ಒಳಗಣ ಬಯಲು

ಲೇ. : ಡಾ. ವಿನಯಾ

ಪ್ರ. : ಛಂದ ಪುಸ್ತಕ, ಬನ್ನೇರುಘಟ್ಟ ರಸ್ತೆ ಬೆಂಗಳೂರು – 560 076

ಮು : 2008

ಬೆಲೆ : ರೂ. 40/-

ಇಣುಕುತ್ತದೆ. 'ಯಾರದೋ ಬಟ್ಟಲ ರುಚಿಯಲ್ಲಿ, ಯಾರದೋ ಮುಡಿಯ ಹೂವಲ್ಲಿ, ಯಾರದೋ ಪೂಜೆಯ ತುಳಸಿಕರಕಿಗಳಲ್ಲಿ ಅಂಜನಿ ಎಂಬ ಹೆಸರು ಹೊಕ್ಕಾಡುತ್ತಿತ್ತು'. ಹೀಗೆ ಊರವರಿಗೆ ಉಪಕಾರಿಯಾಗಿರುವ ಅಂಜನಿಯ ಬದುಕು ಮಾತ್ರ ಅದಕ್ಕೇ ಮೀಸಲಾದಂತಿತ್ತು. ಮದುವೆಯಾಗುವ ಭರವಸೆ ತೋರಿಸಿದ ಅತ್ತೆಯ ಮಗ ಅನಿಲ ಬೇರೆಯವಳನ್ನು ಮದುವೆಯಾದ. 'ನಾಯೇನವಳ ಮೈ ಮುಟ್ಟೀನಾ?' ಎನ್ನುವ ಅನಿಲನ ಸಮರ್ಥನೆ ಮೇಲುನೋಟಕ್ಕೆ ಸೈ. ಆದರೆ ಅವಳ ಒಳಗು ಅದನ್ನು ಗ್ರಹಿಸುವುದು 'ಮುಟ್ಟೂದಂದ್ರೆ ಬರೀ ಮೈ ಅಂತ ತಿಳದ್ಯಾ?' ಅಂತ. ಅವಳ ತಮ್ಮ ಒಳ್ಳೆಯ ಉದ್ಯೋಗ ಹಿಡಿದು ದೂರದ ಮುಂಬೈಯ ನಿವಾಸಿಯಾಗಿ ಮನೆಯ ತಾಪತ್ರಯಗಳನ್ನು ಅವಳಿಗೆ ಖಾಯಂಗೊಳಿಸಿದ. ಯಾವುದಕ್ಕೂ ಬೇಸರಿಸದೆ ಬದುಕಿನಲ್ಲಿ ಚೇತನ ಉಳಿಸಿಕೊಂಡು ಜೀವನಪ್ರೀತಿಗೆ ವಿಮುಖಳಾಗದ ಅಂಜನಕ್ಕ ಕೊನೆಯಲ್ಲಿ ಆತ್ಮಹತ್ಯೆಗೆ ಶರಣಾದುದು ಊರಿನವರ ದೃಷ್ಟಿಯಲ್ಲಿ ಸರಿಯಾದುದಲ್ಲ. ಸೇವೆ ಮಾಡಲು ಮಗಳು, ಆಸ್ತಿಯ ಒಡೆತನ ಗಂಡು ಮಗನದು ಎನ್ನುವ ರಾಮಜ್ಜನ ತರ್ಕಕ್ಕೆ ಸಾಮಾಜಿಕ ಒಪ್ಪಿಗೆಯೇನೋ ಇದೆ. ಆದರೆ ಆನುವ ಗೋಡೆಯನ್ನು ಕಿತ್ತುಕೊಂಡ ಸ್ಥಿತಿಗೆ ಅಂಜನಕ್ಕನನ್ನು ದೂಡಿದ ಪಿತೃಪ್ರಧಾನತೆಯ ಕರಾಳ ಮುಖವನ್ನು ಕತೆ ಸೂಕ್ಷ್ಮವಾಗಿ ಕಂಡರಿಸುತ್ತದೆ.

ಮಹಿಳೆ ಹೊರಗಿನ ಬದುಕಿಗೆ ಎಷ್ಟೇ ತೆರೆದುಕೊಂಡರೂ ಅವಳಿಗೆ ಸ್ವಂತ ಬದುಕನ್ನು ಮೀರಿ ಅದನ್ನು ಅಪ್ಪಿಕೊಳ್ಳಲು ಸಾಧ್ಯವಾಗದು. ವೈಯಕ್ತಿಕ ಬದುಕು ಅವಳ ಮೊದಲ ಆದ್ಯತೆ. ತನ್ನ ಬಾಳಸಂಗಾತಿಯೂ ಹಾಗಿರಬೇಕೆಂದು ಬಯಸುತ್ತಾಳೆ. ಪರಿಸರ, ನೀರಿನ ಉಪಯುಕ್ತ ಬಳಕೆ ಮುಂತಾದ ಸಾರ್ವಜನಿಕ ಕೆಲಸಗಳಲ್ಲಿನ ಗಂಡನ ತೊಡಗುವಿಕೆಯನ್ನು ಕಥಾನಾಯಕಿ ಮೆಚ್ಚಿದವಳೇ. ಬಧುಕಿನ 'ದಣಿವು ಕಾಲೂರುವ ಹೊತ್ತು' ಅವಳಿಗೆ ವೈಯಕ್ತಿಕ ಸಂಬಂಧಕ್ಕಿಂತ ಸಾರ್ವಜನಿಕ ಬದುಕಿಗೆ ಗಂಡ ಹೆಚ್ಚು ಪ್ರಾಧಾನ್ಯ ನೀಡುತ್ತಿದ್ದಾನೆಯೇ? ಎನ್ನುವ ಪ್ರಶ್ನೆ ಕಾಡುತ್ತದೆ. ಕುಟುಂಬವೇ ಜಗತ್ತು ಎನ್ನುವ ಗಂಡಸು ಮತ್ತು ಕುಟುಂಬದ ಹೊರತಾದ ಬದುಕಿದೆ ಎನ್ನುವ ಗಂಡಸು ಎರಡರಲ್ಲಿ ಮಹಿಳೆಯ ಆಯ್ಕೆ ಮೊದಲನೆಯದು ಎನ್ನುವ ಕಡೆ ಕತೆ ವಾಲುತ್ತದೆ.

'ನಿಂಗೆ ಬೇಡಾದ್ರೆ ನಂಗೂ ಬೇಡ' ಎನ್ನುವ ಗಟ್ಟಿ ನಿರ್ಧಾರದಲ್ಲಿ ಬದುಕನ್ನು ಸವೆಸುವ 'ಸ್ವಯ'ದ ಕಥಾನಾಯಕಿ ಗಂಡ ಅಪಘಾತಕ್ಕೊಳಗಾದಾಗ ಸಾಮಾನ್ಯ ಮಹಿಳೆಯಂತೆಯೇ ಆತನ ಸೇವೆ ಮಾಡಲು ಮುಂದಾಗುತ್ತಾಳೆ. ಗಂಡ ಹೆಂಡತಿಯರ ನಡುವೆ 'ಸ್ವಂತಿಕೆ'ಯ ಮೇಲಾಟದಲ್ಲಿ ಇಬ್ಬರೂ ಪರಸ್ಪರ ದೂರವಾಗಿದ್ದರೂ ನಡುವೆ ಪ್ರೀತಿ ನಾಶವಾಗಿರುವುದಿಲ್ಲ ಎನ್ನುವುದನ್ನು ಕತೆಯ ಅಂತ್ಯ 'ಕಾಣಿ'ಸುತ್ತದೆ. ಗಂಡಹೆಂಡತಿಯರ ಪ್ರೀತಿ, ಸ್ವಾಭಿಮಾನಗಳ ನಡುವಿನ ತಾಕಲಾಟವನ್ನು ಚಿತ್ರಿಸಲು ಕತೆ ಪ್ರಯತ್ನಿಸುತ್ತದೆ.

ಜಾತಿ, ಧರ್ಮಗಳ ಕಟ್ಟುಪಾಡಿನಿಂದ ಹೊರತಾದ ಸ್ನೇಹವನ್ನು ಕೋಮುಭಾವನೆ ಸುಟ್ಟು ಕರಕಲಾಗಿಸುವ ಪರಿಯನ್ನು 'ಕ್ಷಮಯಿರಲಿ ಕಂದಾ' ಕಟ್ಟಿಕೊಡುತ್ತದೆ. ಮುಗ್ಧತೆಯನ್ನು ಹಾಳುಗೆಡವಿ ಅಲ್ಲಿ ಕೋಮುವಾದದ ವಿಷಬೀಜ ಬಿತ್ತುವ ಕೊಳಕು ಮನಸ್ಸುಗಳು ಮಾನವೀಯತೆಯನ್ನೇ ನುಂಗಿ ನೊಣೆಯುತ್ತವೆ. ಇದನ್ನು ತಿಳಿದೂ ಏನೂ ಮಾಡಲಾಗದ ಅಸಹಾಯಕತೆಯಲ್ಲಿ ನೋಯುವ ಪ್ರಾತಿನಿಧಿಕ ಪಾತ್ರವಾಗಿ ಇಲ್ಲಿನ ಅಧ್ಯಾಪಕಿ ಚಿತ್ರಿತಳಾಗಿದ್ದಾಳೆ. ಅಧ್ಯಾಪನ ಎಂದರೆ ಪಾಠಪ್ರವಚನಕ್ಕೆ ಸೀಮಿತವೇ ಎನ್ನುವ ಪ್ರಶ್ನೆಯನ್ನು ಓದುಗರ ಮನದಲ್ಲಿ ಮೂಡಿಸುವುದು ಕತೆಯ ಇತ್ಯಾತ್ಮಕ ಅಂಶ.

ಹಳ್ಳಿಯ ಭಿತ್ತಿಯ ಮೇಲೆ ಅಲ್ಲಿನ ಬದುಕು ಅರಳುವ, ನಲಿಯುವ, ನರಳುವ ಬಗೆಯನ್ನು ಕತೆಗಳು ಅನಾವರಣಗೊಳಿಸುತ್ತವೆ. ಮಲೆನಾಡು ಮತ್ತು ಕರಾವಳಿಯ ಬದುಕಿನ ಭಾಗಗಳಾಗಿರುವ ದಣಪೆ, ಓಣಿ, ಮನೆ, ಹಿತ್ತಿಲುಗಳು ಆಪ್ತತೆಯನ್ನು ಕಾಯ್ದುಕೊಳ್ಳುವಲ್ಲಿ ಸಹಕಾರಿಯಾಗಿವೆ. ಇಂಥ ಸಮೃದ್ಧ ಬದುಕೊಂದು ಕಳೆದುಹೋಗುತ್ತಿರುವುದರ ಬಗೆಗಿನ ಹಳಹಳಿಕೆಗಿಂತ ಕಾಳಜಿ ಇಲ್ಲಿ ವ್ಯಕ್ತವಾಗುತ್ತದೆ. ಒಮ್ಮೊಮ್ಮೆ ಕತೆಗಳನ್ನು ಆವರಿಸುವ ವಿಷಾದದ ಛಾಯೆ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. '.... ಮಾನವ ಸಂಬಂಧಗಳ ಸ್ವರೂಪ ಮತ್ತು ಅವುಗಳ ವಿನ್ಯಾಸ ಮೈ ತಳೆಯುವ ಮತ್ತು ಹುಡಿಗೊಳ್ಳುವ ಬಗೆ ಅವರ ಕಥನದ ಮುಖ್ಯ ನೆಲೆಯಾಗಿರುವಂತಿದೆ' ಎಂದು ಬೆನ್ನುಡಿಯಲ್ಲಿ ಕೆ.ವಿ.ನಾರಾಯಣ ಅವರು ಹೇಳಿರುವುದು ಸಮರ್ಥನೀಯ.

ಸಂಕಲನದ ಕೊನೆಯ 'ಪ್ರೀತಿ', 'ಜಾಣೆಯಾಗಿರು ನನ್ನ ಮಲ್ಲಿಗೆ', ಮತ್ತು 'ಹತ್ತು ವರ್ಷದ ಹಿಂದೆ ಮುತ್ತೂರ ತೇರಿನಲಿ'- ಮೂರೂ ಕತೆಗಳು ಅವಸರದಲ್ಲಿ ಮೈತಳೆದಂತೆನಿಸುತ್ತವೆ. ಅವು ಕತೆ ಎನ್ನುವುದಕ್ಕಿಂತ ಒಂದು ಲಹರಿ ಎನಿಸಿಕೊಂಡು ಮನಸ್ಸನ್ನು ಅಷ್ಟಾಗಿ ತಟ್ಟದೆ ಹೊರಗೆ ನಿಲ್ಲುತ್ತವೆ.

ಕನ್ನಡದಲ್ಲಿ ಬರೆಯುತ್ತಿರುವ ಹೊಸ ತಲೆಮಾರಿನ ಕತೆಗಾರರಲ್ಲಿ ವಿನಯಾ ಭರವಸೆ ಮೂಡಿಸುವ ಲೇಖಕಿ. ಅವರಿಂದ ಇನ್ನಷ್ಟು ಕತೆಗಳು ತನ್ನೆಲ್ಲ ಕಸುವಿನೊಂದಿಗೆ ಮೂಡಿ ಬರಲಿ ಎನ್ನುವುದು ಸಹೃದಯ ಹಾರೈಕೆ.

❑

ಗುಲಾಬಿ ಟಾಕೀಸು ಮತ್ತು ದೊಡ್ಡ ಅಲೆಗಳು

• ಬಾಗೇಶ್ರೀ

ಗುಲಾಬಿ ಟಾಕೀಸ್ ಸಿನೆಮಾ ನೋಡುವುದಕ್ಕೆ ಮೊದಲು ಒಂದು statutory warning: ಇದೇ ಹೆಸರಿನ ವೈದೇಹಿಯ "ಮೂಲ ಕತೆ"ಯನ್ನು ಸಿನೆಮಾ ನೋಡುವುದಕ್ಕೆ ಮುಂಚೆ ಓದಿಕೊಂಡು ಹೋಗಬೇಡಿ. ಈಗಾಗಲೆ ಓದಿಬಿಟ್ಟಿದ್ದರೆ ಅದಕ್ಕೂ ಸಿನೆಮಾಕ್ಕೂ ಏನಾದರೂ ಸಂಬಂಧ ಇರಬಹುದು ಎಂಬ ನಿರೀಕ್ಷೆಯನ್ನು ಇಟ್ಟುಕೊಂಡಂತೂ ಹೋಗಬೇಡಿ. ಕತೆ ಮತ್ತು ಸಿನೆಮಾಗಿರುವ ವ್ಯತ್ಯಾಸ ಸಣ್ಣ ಅಲೆ ಮತ್ತು ಸೈಕ್ಲೋನಿನ ನಡುವಿನ ವ್ಯತ್ಯಾಸದಂತಹದು.

ರೋಲಾಂಡ್ ಬಾರ್ಥ್‌ನ ಹಾಗೆ "death of the author" ಬಗ್ಗೆ ಪೂರ್ತಿ ನಂಬಿಕೆ ಇಟ್ಟು, ಒಂದು ಪಠ್ಯದ ಓದು ಯಾವ್ಯಾವ ದಿಕ್ಕಿನಲ್ಲಿ ಬೇಕಾದರೂ ಹರಿಯಬಹುದು ಎಂದು ಮನದಟ್ಟು ಮಾಡಿಕೊಂಡು, ವೈದೇಹಿ ಕತೆಯ ಹಳೆಯ ಓದಿನ ಭಾರವನ್ನು ಬದಿಗಿಟ್ಟ ನಂತರವೇ ಈ ಸಿನೆಮಾ ನೋಡಲಿಕ್ಕೆ ಸಾಧ್ಯ. ಆದ್ದರಿಂದ ಋಷಿ, ನದಿ, ಸಿನೆಮಾ ಎಲ್ಲದರ "ಮೂಲ"ಗಳನ್ನೂ ಬಿಟ್ಟು ಮುಂದಿನ ಮಾತು.

ಕೋಮುವಾದಿ ವಿಷ ನಮ್ಮ ಹೃದಯಕ್ಕೆ, ಮೆದುಳಿಗೆ ತಲುಪಿಯಾಯಿತು ಎಂದು ಅನ್ನಿಸುವಂತಹ ನಮ್ಮ ಸಂದರ್ಭದಕ್ಕೆ ಈ ಚಿತ್ರ ಅತ್ಯಂತ ಪ್ರಸ್ತುತವಾದದ್ದು. ನನ್ನ ದೃಷ್ಟಿಯಲ್ಲಿ, ಕಾಸರವಳ್ಳಿಯವರ ನಾನು ನೋಡಿದ ಎಲ್ಲಾ ಸಿನೆಮಾಗಳಲ್ಲಿ ತನ್ನ ಕಾಲದ ನಾಡಿಯನ್ನು ಅತ್ಯಂತ ಕರಾರುವಾಕ್ಕಾಗಿ ಹಿಡಿಯುವ, ಸಂದರ್ಭದ ಆಯಾಮಗಳನ್ನು ಎಲ್ಲೂ ಸರಳೀಕರಿಸದೆ ಕಟ್ಟಿರುವ ಅತ್ಯಂತ ಗಟ್ಟಿಮುಟ್ಟಾದ ಚಿತ್ರ "ಗುಲಾಬಿ ಟಾಕೀಸ್".

ಸಿನೆಮಾದ ಗುಲಾಬಿ (ಗುಲ್ನಬಿ) ಬ್ಯಾರಿ ಜನಾಂಗದ ಸೂಲಗಿತ್ತಿ ಹೆಂಗಸು. ಅವಳ ಕಿಲಾಡಿ ಗಂಡ ಮೂಸ ತಲಾಕ್ ನೀಡದಿದ್ದರೂ ಇವಳಿಂದ ದೂರವಾಗಿ ಬೇರೆ ಸಂಸಾರ ಹೂಡಿದ್ದಾನೆ. ಎರಡನೆ ಹೆಂಡತಿಯಿಂದ ಒಬ್ಬ ಮಗ ಇದ್ದಾನೆ. ನೂರಾರು ಹೆರಿಗೆ ಮಾಡಿಸುವ ಇವಳಿಗೆ ಮಕ್ಕಳಿಲ್ಲ. ಮಲಮಗ ಅದ್ದುನ ಒಂದು ಪ್ರೀತಿಯ ಮುತ್ತಿಗಾಗಿ ಕಾಡಿ, ಬೇಡಿ, ಲಂಚ ನೀಡಿ ತಹತಹಿಸುತ್ತಾಳೆ. ಬಹಳಷ್ಟು ಸಂದರ್ಭಗಳಲ್ಲಿ ಅದೂ ಸಿಗುವುದಿಲ್ಲ. ಹೀಗೆ ಗುಲಾಬಿ ತನ್ನ ಸ್ವಂತ ಸಂಸಾರದ ಲೆಕ್ಕದಲ್ಲಿ ನೋಡಿದರೆ ಒಂಟಿ. ಆದರೆ ಅವಳಿಗೆ ಇಡೀ ಊರೇ ಸಂಸಾರ. ಅದಕ್ಕಿಂತ ಹೆಚ್ಚು ಸಿನೆಮಾಗಳ ರಂಗುರಂಗಿನ ಪ್ರಪಂಚದ ಊರುಗೋಲು ಅವಳಿಗಿದೆ. ದಿನಾ ತಪ್ಪದೆ ಅವಳು ಸಿನೆಮಾ ನೋಡುತ್ತಾಳೆ. ಒಂದೇ ಸಿನೆಮಾವನ್ನು ದಿನಾ ನೋಡಿಯೂ ಹೊಸ ಹೊಸ ಕನಸುಗಳನ್ನು ನೋಡುವ ಒಳಗಣ್ಣು ಅವಳಿಗಿದೆ. ಅವಳ ವ್ಯಕ್ತಿತ್ವದಲ್ಲಿಯೇ ಅಂತರ್ಗತವಾಗಿ ಎಲ್ಲದರಲ್ಲಿಯೂ ತಮಾಷೆಯ ಎಳೆಯನ್ನು ನೋಡುವ ಶಕ್ತಿ ಮತ್ತು ದಿನದಿನದ ಬದುಕಿನಿಂದಲೇ ಹುಟ್ಟುವ ಸಹಜ ತತ್ವಜ್ಞಾನದ ಹೊಳಹೂ ಇದೆ.

ಇವಳ ಸಣ್ಣ ಕಿಟಕಿಯಿಂದಾಚೆ ಕಾಣುವುದು ಹಳ್ಳಿಯ ದೃಶ್ಯಗಳು. ಮೀನುಗಾರರ ಕಷ್ಟದ ಜೀವನ, ಇವರ ಒಳಜಗಳಗಳು, ಬಡತನ, ಇವರ ನಗು, ಅಳು. ಇನ್ನೂ ಆಚೆ ಇವೆಲ್ಲವನ್ನೂ ನಿರ್ವಿಕಾರವಾಗಿ ನೋಡುವ ಸಮುದ್ರ, ಅದರಾಚೆ ಪಟ್ಟಣ.

ಒಂದು ಕಷ್ಟದ ಪ್ರಸವಕ್ಕೆ ಸಹಾಯ ಮಾಡಿದ್ದಕ್ಕೆ ಶ್ರೀಮಂತ ಮಹಿಳೆಯೊಬ್ಬಳು ಗುಲಾಬಿಗೆ ಸ್ಯಾಟಲೈಟ್ ಟೀವಿ ಕೊಟ್ಟ ಮೇಲೆ ಗುಲಾಬಿಯ ವೈಯಕ್ತಿಕ ಜೀವನ, ಹಳ್ಳಿಯ ಜೀವನ ಮತ್ತು ಇವೆರಡನ್ನು ಬೆಸೆಯುವ ಬಗೆ ಬದಲಾಗುತ್ತಾ ಹೋಗುತ್ತದೆ. ಹೆಂಗಸರ ಪ್ರಪಂಚಕ್ಕೆ ಒಂದು ಹೊಸಬಗೆಯ ರಂಗಿನ ಲೇಪನವಾಗುತ್ತದೆ. ಈ ರಂಗಿನಲ್ಲಿ ಅವರ ಸ್ವಂತ ಜೀವನಕ್ಕೆ ಟ್ರಾಜಿಡಿ, ಕಾಮೆಡಿ ಎರಡೂ ತರುವ ಸಾಧ್ಯತೆಗಳು ಬೆರೆತಿವೆ.

ಇದೆಲ್ಲವನ್ನು ನಿಧಾನವಾಗಿ ಬಳಸಿಕೊಳ್ಳುತ್ತಾ ಸಾಗುವುದು 90ರ ದಶಕದ ರಾಜಕೀಯ ಸನ್ನಿವೇಶ. ಒಂದು ಕಡೆಯಲ್ಲಿ ಕಾರ್ಗಿಲ್ ಯುದ್ಧ ಶುರುವಾಗಿದೆ. ಇನ್ನೊಂದೆಡೆ ಕರಾವಳಿಯಲ್ಲಿ ಟ್ರಾಲರ್‌ಗಳು ತಂದ ಆರ್ಥಿಕ ಜಾಗತೀಕರಣದ ಅಲೆಗಳು ಮೀನುಗಾರಿಕೆಯ ತಳಹದಿಯನ್ನು ಅಲ್ಲಾಡಿಸುತ್ತಿದೆ. ಗಲ್ಫಿನಿಂದ ಬಂದ ದುಡ್ಡಿದೆ. ಅದರ ವಿರುದ್ಧ ಮೀನುಗಾರರಿಗೆ ರೋಷವಿದೆ. ಸರ್ಕಾರ ಇದೇ ಸಮಯಕ್ಕೆ ಬಹುರಾಷ್ಟ್ರೀಯ ಕಂಪನಿಗಳಿಗೆ ಬೇಕಾಬಿಟ್ಟಿ ಮೀನು ಹಿಡಿಯುವ ಲೈಸೆನ್ಸ್ ಕೊಡುತ್ತಿದೆ. ಬಲ ಪಂಥೀಯ ವಿಚಾರ ಧಾರೆಯ ಹರಿಕಾರರು ಈ ಸಂದರ್ಭದಲ್ಲಿ ತಮ್ಮ ರಾಜಕೀಯಕ್ಕೆ ಬೇಕಾದದ್ದನ್ನು ಮಾತ್ರ ಬಳಸಿಕೊಳ್ಳಲು ಮಸಲತ್ತು ನಡೆಸುತ್ತಿವೆ.

ಇದೆಲ್ಲಾ ಪರ್ಯವಸಾನವಾಗುವುದು ಗುಲಾಬಿ "ಹೊರಗಿನವಳು" ಎಂದು ಕುದ್ರುವಿನ ಹೊರಗಿನಿಂದ ಬಂದ ವ್ಯಕ್ತಿಗಳು ತೀರ್ಮಾನ ತೆಗೆದುಕೊಂಡು ಅವಳನ್ನು ಹೊರ ಹಾಕುವುದರೊಂದಿಗೆ. ಆದರೆ ಗುಲಾಬಿಯ ವ್ಯಕ್ತಿತ್ವಕ್ಕೆ ಒಂದು ಒಳಗಣ ಶಕ್ತಿ ಇದೆ. ಈ ಪುಂಡರ ಹಿಕ್ಮತ್ತಿನ ಮುಂದೆ ಅವಳ ದೈಹಿಕ ಶಕ್ತಿ ಸೋತರೂ ಅವಳ ಡಿಗ್ನಿಟಿ ಸೋಲುವುದಿಲ್ಲ. "ಔಟ್" ಎಂದು ಇಂಗ್ಲಿಷ್ ಬಳಸಿ ಅವಳನ್ನು ಹೊರದಬ್ಬುವ ಪುಂಡ ಯುವಕನಿಗೆ "ನಾನು ನಿನ್ನ ಅಬ್ಬಿ ಹೆರಿಗೆಗೆ ಬರದೆ ಇದ್ದಿದ್ರೆ ನೀನು ಅವತ್ತೇ ಔಟ್ ಆಗ್ತಿದ್ದೆ" ಅನ್ನುತ್ತಾಳೆ. ಊರಿಂದ ಹೊರ ಹೋದರೂ ಹೆಂಗಸರು ಹೆರುವವರೆಗೆ ತನ್ನ ಜೀವನಕ್ಕೆ ಕಷ್ಟ ಇಲ್ಲ ಅನ್ನುವ ಅವಳ ಧೈರ್ಯವನ್ನು ಯಾರೂ ಕಿತ್ತುಕೊಳ್ಳಲಿಕ್ಕೆ ಸಾಧ್ಯವಿಲ್ಲ.

ಗುಲಾಬಿಯ ಜೀವನ, ಹಳ್ಳಿಯ ದಿನದಿನದ ಆಗುಹೋಗುಗಳು, ಬಡತನ, ಸಾಲಸೂಲ, ಜಾತೀಯತೆ, ಕೋಮು–ಕೋಮುಗಳ ನಡುವಿನ ಸಂಬಂಧ, ಹೆಣ್ಣು–ಗಂಡಿನ ನಡುವಿನ ಸಂಬಂಧ, ಪುರುಷ ಪ್ರಧಾನತೆ, ಸ್ಯಾಟಲೈಟ್ ಟಿವಿ ಊರಿನಲ್ಲಿ ತರುವ ಸ್ಥಿತ್ಯಂತರಗಳು, ತೊಂಬತ್ತರ ದಶಕದಲ್ಲಿ ಕರಾವಳಿಯಲ್ಲಿ ಏಳುತ್ತಿದ್ದ ಕೋಮುವಾದದ ಅಲೆ ದೊಡ್ಡದಾಗುತ್ತಾ ಬೆಳೆದದ್ದು, ಮೀನುಗಾರಿಕೆಯ ವೃತ್ತಿಯಲ್ಲಿ ಆರ್ಥಿಕ ಜಾಗತೀಕರಣದಿಂದ ಆಗುತ್ತಿದ್ದ ಬದಲಾವಣೆಗಳು, ದೂರದ ಕಾರ್ಗಿಲ್ಲಿನಲ್ಲಿ ನಡೆಯುತ್ತಿದ್ದ ಯುದ್ಧ, ಅದನ್ನು ಆಕಾಶ ಮಾರ್ಗೇನ ಕುದ್ರು ಎಂಬ ಕುಗ್ರಾಮದ ಟೀವಿಯಲ್ಲಿ ಬಿಂಬಿಸುವ ಕಣ್ಣಿಗೆ ಕಾಣದ ಶಬ್ದದ ಅಲೆಗಳು, ಇದೆಲ್ಲವನ್ನೂ ಬಳಸಿಕೊಳ್ಳುವ ಕಾಣದ ರಾಜಕೀಯ ಕೈಗಳು... ಹೀಗೆ micro ಮತ್ತು macro ಸ್ತರಗಳಲ್ಲೆರಡರಲ್ಲೂ ಒಮ್ಮೆಲೇ ಸಿನೆಮಾ ಬಿಚ್ಚಿಕೊಳ್ಳುತ್ತಾ, ಒಂದಕ್ಕೊಂದು ಹೊಸೆದುಕೊಳ್ಳುತ್ತಾ ಹೋಗುತ್ತದೆ. ಈ ಸಿನೆಮಾದ ದೊಡ್ಡ ಶಕ್ತಿ ಇರುವುದು ಇದು ಬೇರೆ ಬೇರೆ ಬಣ್ಣದ ಎಳೆಗಳನ್ನು ನಿಧಾನವಾಗಿ ನೂಲುತ್ತಾ, ಅವನ್ನು ಒಟ್ಟಿಗೆ ತಂದು ಒಂದು ಬಲೆಯನ್ನು ನೇಯುವ ಬಗೆ.

ದೊಡ್ಡ ಪ್ರಪಂಚವನ್ನು ತೋರುವ ಟೀವಿಯ ಕಂಡಿ ಮತ್ತು ಗುಲಾಬಿಯ ಮನೆಯಿಂದ ಹೊರಗೆ ಮತ್ತು ಹೊರಗಿಂದ ಒಳಗೆ ನೋಡುವ ಪುಟ್ಟ ತಳಿಕಂಡಿಯನ್ನು ಚಿತ್ರದುದ್ದಕ್ಕೂ ಕಾಸರವಳ್ಳಿಯವರು juxtapose ಮಾಡುತ್ತಾ ಹೋಗುವುದನ್ನು ಗಮನಿಸಬಹುದು. ಹಿಂದಿನ ಹಲವು ಚಿತ್ರಗಳಲ್ಲಿ (ಉದಾಹರಣೆಗೆ "ಮನೆ" ಮತ್ತು "ಕ್ರೌರ್ಯ") ಸಿಂಬಲ್‌ಗಳನ್ನು ತುಂಬ ಪ್ರಯತ್ನಪೂರ್ವಕವಾಗಿ ಬಳಸಿದಂತೆ ನನಗೆ ತೋರುತ್ತಿದ್ದರೆ, ಈ ಚಿತ್ರದಲ್ಲಿ ಕಿಟಕಿ, ಬೆಕ್ಕು ಈ ರೀತಿಯ ಸಿಂಬಲ್ಲುಗಳು ಹೊರತಾಗಿ ನಿಲ್ಲುವುದಿಲ್ಲ ಅನ್ನಿಸಿತು.

ಈ ಚಿತ್ರದ ನೇಯ್ಗೆ ಎಲ್ಲಿಯೂ ಜಾಳಾಗದೆ, ಸುಲಭದ ಕಪ್ಪು-ಬಿಳುಪಿನ ಪ್ಯಾಟರ್ನುಗಳಿಗೆ ಶರಣಾಗದೆ ಸಾಗುವ ರೀತಿ ಇದರ ಇನ್ನೊಂದು ವಿಶೇಷ. ಉದಾಹರಣೆಗೆ, ಈ "ಹೊರಗಿನವರು" ಬಿತ್ತಿದ ಜಾತಿ-ಮತ ವೈಷಮ್ಯ ಬಿತ್ತುವುದಕ್ಕೆ ಮೊದಲು ಕುದ್ರುವೇನೂ ಸಮಾನತೆಯೇ ರಾರಾಜಿಸುವ ಕನಸಿನ ರಾಜ್ಯ ಆಗಿರಲಿಲ್ಲ ಎಂಬುದನ್ನು ಕಾಸರವಳ್ಳಿ ಸೂಕ್ಷ್ಮವಾಗಿ ಸೂಚಿಸುತ್ತಾರೆ. ವಾಸಿಂನ "ಜಾತಿ ಬುದ್ಧಿ"ಯನ್ನು ಹಂಗಿಸುವ ಪರಿಪಾಠ, ಯಾರನ್ನು ಯಾರು ಮುಟ್ಟಬಹುದು ಮತ್ತು ಮುಟ್ಟಬಾರದು ಎಂಬ ಕಟ್ಟಳೆಗಳು, ಹೆಂಗಸರನ್ನು ಹದ್ದುಬಸ್ತಿನಲ್ಲಿಡುವುದು ಗಂಡಸ್ತನದ ಸಂಕೇತ ಎಂಬ ನಂಬಿಕೆ ಎಲ್ಲವೂ ಇದ್ದೇ ಇದೆ. ಸ್ಥಳೀಯ ಬಂಡವಾಳಶಾಹಿಯ ಬಿಗಿಮುಷ್ಟಿಯಲ್ಲಿ, ಸಾಲದ ಬಲೆಯಲ್ಲಿಯೇ ಇಲ್ಲಿನ ಎಲ್ಲಾ ಮೀನುಗಾರರೂ ಇರುವುದು. ಸಂಘ ಪರಿವಾರಗಳು (ಹಾಗಂತ ನೇರ ಪ್ರಸ್ತಾಪ ಚಿತ್ರದಲ್ಲಿ ಇಲ್ಲದಿದ್ದರೂ ಇದು ಸರ್ವವಿದಿತ) ಈ ಎಲ್ಲ ನೆಲದಲ್ಲೇ ಇದ್ದ ಗುಣಗಳೊಡನೆ ಒಂದಷ್ಟು ಹೊರಗಿನದನ್ನು ಬೆರೆಸಿ, ಗಾಳಿಸುದ್ದಿಗಳನ್ನು ಹಬ್ಬಿಸಿ ಜಾಣ್ಮೆಯಿಂದ ಹೇಗೆ ವೈಷಮ್ಯವನ್ನು ಬಿತ್ತುತ್ತಾರೆ ಎಂಬುದನ್ನು ಕಾಸರವಳ್ಳಿ ಅತ್ಯಂತ ಸಮರ್ಥವಾಗಿ ಚಿತ್ರಿಸುತ್ತಾರೆ.



ಹೀಗೆ ಚಿತ್ರದ ಅಗಲ ಕ್ಯಾನ್ವಾಸನ್ನು ನೋಡುವುದು ಒಂದು ಬಗೆ. ಅದನ್ನು ಬಿಟ್ಟು ಚಿತ್ರದ ಒಂದೊಂದು ಪಾತ್ರದ ಜಾಡು ಹಿಡಿದು ಹೊರಟರೆ ಒಂದೊಂದು ಹೊಸ ಲೋಕಗಳೇ ತೆರೆದುಕೊಳ್ಳುತ್ತವೆ. ಉದಾಹರಣೆಯ ರೂಪದಲ್ಲಿ ನೇತ್ರು ಮತ್ತು ಗುಲಾಬಿ ಪಾತ್ರಗಳ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ನೋಡಬಹುದು. ಇಬ್ಬರೂ ಕನಸುಗಾರರು. ತಮ್ಮ ಸೀಮಿತ ಪ್ರಪಂಚ ದಿಂದಾಚೆಯ ಬಗ್ಗೆ ಹಂಬಲಿಕೆ ಇರುವವರು. ಟೀವಿ ಧಾರಾವಾಹಿಯ ಪಾತ್ರಗಳಿಗಿರುವ ನಾಟಕೀಯತೆ, ರೊಮಾನ್ಸ್ ಕಂಡು ಹಿಗ್ಗುವವರು. ಬಿಸಿ ರಕ್ತದ ತರುಣಿ ನೇತ್ರು ಈ ಕನಸನ್ನು ನನಸು ಮಾಡಿಕೊಳ್ಳುವ ಸಾಹಸಕ್ಕೆ ಇಳಿಯುತ್ತಾಳೆ. ಕೊನೆಗೆ ಸಂಪೂರ್ಣ ವಿಫಲಳಾಗುತ್ತಾಳೆ. ಬುರ್ಖಾ ಹಾಕಿಕೊಳ್ಳದೆ ದೋಣಿ ಹತ್ತದ, ಜಾತಿ ಮತ್ತು ಕೌಟುಂಬಿಕ ಎರಡೂ ನೆಲೆಯಲ್ಲಿಯೂ ಏಕಾಂಗಿಯಾದ ಗುಲಾಬಿ ನೇತ್ರುವಿನಂತೆ ಸೋಲನ್ನು ಒಪ್ಪಿಕೊಳ್ಳದೆ ಇರುವುದನ್ನು ಚಿತ್ರಿಸುವ ಮೂಲಕ ಮುಸ್ಲಿಂ ಮಹಿಳೆಯರ "ಅಸಹಾಯಕತೆಯ" ಬಗ್ಗೆ ನಮ್ಮ ಮನದಲ್ಲಿರುವ ಸ್ಥಿರ ಚಿತ್ರಗಳನ್ನು ಕಾಸರವಳ್ಳಿ ಅಲ್ಲಾಡಿಸುತ್ತಾರೆ.

ನೇತ್ರುವಿನ ಸೋಲಿನ ಮೂಲ ಇರುವುದು ಅವಳು ನಂಬಿದ ರಂಜಕ ಧಾರಾವಾಹಿಯ ತರ್ಕದಲ್ಲಿಯೇ? "ಗುಲಾಬಿ ಟಾಕೀಸ್"ನಲ್ಲಿ ಹೆಂಗಸರು ಮತ್ತು ಗಂಡಸರು ಟಿವಿ ಮುಖೇನ ಕಾಣುವ ಪ್ರಪಂಚ ಸಂಪೂರ್ಣ ಭಿನ್ನವಾದದ್ದು. ಒಂದು ಧಾರಾವಾಹಿಗಳದಾದರೆ ಇನ್ನೊಂದು ವಾರ್ತೆಗಳದು. ಈ ರೀತಿಯ compartmentalisation ತೀರಾ watertight ಆಯಿತೇನೋ, ಈ ಮೂಲಕ ಹೆಂಗಸರು ಯಾವತ್ತೂ ಭಾವನಾತ್ಮಕ ಜೀವಿಗಳು ಎಂಬ stereotype ಇನ್ನಷ್ಟು ಬಲಗೊಳ್ಳುತ್ತಿದೆಯೇನೋ ಅನ್ನಿಸುವಷ್ಟು ಈ ಎರಡು ಪ್ರಪಂಚಗಳು ಭಿನ್ನ. ಅದೇನೇ ಇರಲಿ, ನೇತ್ರು ಮತ್ತು ಇತರ ಹೆಂಗಸರು ಈ "ಧಾರಾವಾಹಿಗಳ ಪ್ರಪಂಚ"ವನ್ನು ಪೂರ್ಣ ನಂಬಿ ಅದರಾಚೆಯ 'ವಾರ್ತೆಗಳ ಪ್ರಪಂಚ"ದ ಗೋಜಿಗೇ ಹೋಗುವುದಿಲ್ಲ. ರಾಜಕೀಯ ಲೇಪವೇ ಇಲ್ಲದ ಕನಸುಗಾರಿಕೆಯನ್ನು ಮಾರುವ ಸ್ಯಾಟಲೈಟ್ ಟೀವಿಯ ಬಗ್ಗೆ ಮತ್ತು ಬಲ ಪಂಥೀಯ ರಾಜಕೀಯದಲ್ಲಿ ಅಡಕವಾಗಿರುವ ಪುರುಷ ಪ್ರಾಧಾನ್ಯದ ಬಗ್ಗೆ ಈ ಪಾತ್ರ ಕನ್ನಡಿ ಹಿಡಿಯುತ್ತದೆ.

ನೇತ್ರುವಿನಷ್ಟೇ ಕನಸುಗಳಿಗೆ ಮಾರು ಹೋಗುವ, ಅ-ರಾಜಕೀಯ ನೆಲೆಯಲ್ಲಿ ನಿಲ್ಲುವ ಗುಲಾಬಿಯ ಶಕ್ತಿ ಎಲ್ಲಿಂದ ಬರುತ್ತದೆ? ಇದು ಅವಳ ವಯಸ್ಸಿನೊಂದಿಗೆ, ಜೀವನಾನುಭವದೊಂದಿಗೆ ಬರುವ ripeness ಇರಬಹುದೆ? ಇದು ಅವಳ ವ್ಯಕ್ತಿತ್ವಕ್ಕೆ ಅಂತರ್ಗತವಾದ ತರ್ಕಕ್ಕೆ ಮೀರಿದ ಶಕ್ತಿಯೇ? ಅಥವಾ ಅವಳ ಸೂಲಗಿತ್ತಿಯ skill ಅವಳಿಗೆ ಒಂದು ವಿಶೇಷ ಆತ್ಮಸ್ಥೈರ್ಯ ನೀಡುತ್ತದೆಯೆ? ಯಾವುದಾದರೂ ಇರಬಹುದು ಅಥವಾ ಎಲ್ಲವೂ ಇರಬಹುದು.

ಈ ಸ್ತ್ರೀ ಪ್ರಪಂಚದ ಬಗ್ಗೆ ಮಾತನಾಡುವಾಗ ಸಿನೆಮಾದ ಸಂದರ್ಭದಿಂದ (ಕಾರ್ಗಿಲ್ ಯುದ್ಧದ ಸಮಯ) ಈಚೆಗೆ ನಡೆದ ಕೆಲವು ವಿದ್ಯಮಾನಗಳನ್ನು ಸಿನೆಮಾಗೆ ನೇರ ಸಂಬಂಧವಿಲ್ಲದಿದ್ದರೂ ಪ್ರಸ್ತಾಪಿಸಬೇಕು ಅನ್ನಿಸುತ್ತದೆ. ಇವತ್ತು ನಮ್ಮ ಕೋಮುವಾದಿ ಪರಿಭಾಷೆ ಮತ್ತು ಅದನ್ನು ಕಾರ್ಯಗತ ಮಾಡುವ ಕಾರ್ಯತಂತ್ರಗಳು ಇನ್ನಷ್ಟು ಬದಲಾಗಿವೆ. ಗುಜರಾತ್ ಗಲಭೆಯಲ್ಲಿ, ಒರಿಸ್ಸಾ ಗಲಭೆಯಲ್ಲಿ ಹೆಂಗಸರ ಪ್ರಪಂಚ ಕೋಮುವಾದಕ್ಕೆ ವಿರುದ್ಧವಾಗಿ ನಿಲ್ಲುವಂತಹದು ಎಂಬ ನಂಬಿಕೆ ಬುಡಮೇಲು ಮಾಡುವ ಅನೇಕ ಘಟನೆಗಳು ನಡೆದಿವೆ. ಇಲ್ಲಿ ಸಂಘ ಪರಿವಾರದ ದುರ್ಗಾವಾಹಿನಿ ಪಡೆಗಳು ವಾತಾವರಣವನ್ನು ಕದಡುವಲ್ಲಿ ತಮ್ಮದೇ ಪ್ರಮುಖ ಪಾತ್ರ ವಹಿಸಿವೆ. ಹೆಣ್ಣಿನ ಗುಣದಲ್ಲಿಯೇ ಕೋಮುವಾದಕ್ಕೆ ವಿರೋಧವಾಗಿ ನಿಲ್ಲುವ "ಸಹಜ" ಗುಣ ಎಂಬ ಆಶಾವಾದವನ್ನು ಕಾರ್ಗಿಲ್ ನಂತರದ ವಿದ್ಯಮಾನಗಳು ಸಾಬೀತು ಮಾಡಿವೆ.

ಹಾಗಾಗಿ "ಗುಲಾಬಿ ಟಾಕೀಸ್"ನ ಹೆಣ್ಣು ಪ್ರಪಂಚದ ಕೋಮುವಾದಿ ಶಕ್ತಿಗಳಿಂದ insular ಆಗಿ ಉಳಿಯುವ ಶಕ್ತಿಯನ್ನು ಈಗಿನ ಸಂದರ್ಭಕ್ಕೆ ಆರೋಪಿಸುವ ತಪ್ಪನ್ನು ನೋಡುಗರು ಮಾಡಿದರೆ ಅದು ಇಂದಿನ ಸಂದರ್ಭವನ್ನು ಸರಳೀಕರಿಸಿದಂತಾದೀತು ಎಂಬುದು ಸಿನೆಮಾ ನೋಡುವಾಗ ಒಮ್ಮೊಮ್ಮೆ ನೆನಪು ಮಾಡಿಕೊಳ್ಳುವುದು ಒಳಿತು.

ಶುಭಂ ಹೇಳುವುದಕ್ಕೆ ಮುಂಚೆ "ಮೂಲಕತೆ"ಯ ವಿಷಯಕ್ಕೆ ಮರಳಿ ಒಂದು ಪ್ರಶ್ನೆ: ಕಾಸರವಳ್ಳಿಯವರ ಹಿಂದಿನ ಚಿತ್ರ "ನಾಯಿ ನೆರಳು"ನ ಉತ್ತರಾರ್ಧಕ್ಕೂ ಮತ್ತು ಭೈರಪ್ಪನವರ ಮೂಲಕತೆಗೂ ಯಾವುದೇ ಸಂಬಂಧವಿರಲಿಲ್ಲ. 'ಗುಲಾಬಿ..." ಸಿನೆಮಾಕ್ಕೂ ಮೂಲ ಕತೆಗೂ ತಲೆಯಿಂದ ಬಾಲದವರೆಗೆ ಏನೂ ಸಂಬಂಧ ಇರುವಂತೆ ಕಾಣುವುದಿಲ್ಲ. ಇದು ಕಾಸರವಳ್ಳಿಯವರದೇ ಕತೆ. ಇಂದಿನ ಸಂದರ್ಭಕ್ಕೆ ತುಂಬ ಪ್ರಸ್ತುತವಾದ ಮತ್ತು ಮನ ಮುಟ್ಟುವ ಕತೆ. ಹಾಗಂತಾದ ಮೇಲೆ ಯಾವುದೋ ಒಂದು ಸಾಹಿತ್ಯ ಕೃತಿಯನ್ನು ಆಧರಿಸಿಯೇ ಚಿತ್ರ ಮಾಡಬೇಕೆಂಬ ಹಠ ಯಾಕೆ ಅಂತ ಅರ್ಥವಾಗುವುದಿಲ್ಲ. ಈ ರೀತಿಯ "ಆಧಾರ" ಗುಲಾಬಿಗಂತೂ ಅಗತ್ಯ ಇರಲಿಲ್ಲವೇನೋ ಅಂತಲೇ ಅನ್ನಿಸುತ್ತದೆ.

❑

ಕನ್ನಡ ಮಹಿಳಾ ಕಾವ್ಯ – ಇಂದು

● ಸ. ಉಷಾ

[ದಿ. ಜೂನ್ 7 ಮತ್ತು ಎಂಟರಂದು ಕುಪ್ಪಳಿಯಲ್ಲಿ 'ನಮ್ಮ ಮಾನಸ' ಮತ್ತು ಕುವೆಂಪು ಪ್ರತಿಷ್ಠಾನ, ಕುಪ್ಪಳಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಸಂಯೋಜಿಸಿದ "ಮಹಿಳೆ–ಅನುಭವ–ಅಭಿವ್ಯಕ್ತಿ: ಒಂದು ಮುಖಾಮುಖಿ" ಎಂಬ ವಿಷಯದ ಕಾರ್ಯಾಗಾರದಲ್ಲಿ ಮಾತನಾಡಿದ ಮಾತುಗಳ ಲಿಖಿತ ರೂಪ. ಅದೇ ಸಂದರ್ಭದಲ್ಲಿ ಗಾರ್ಮೆಂಟ್ ಕಾರ್ಮಿಕರ ಬವಣೆಯನ್ನು ಕೇಳಿದ ಸವಿತಾ ಬನ್ನಾಡಿ ಅವರು ಒಂದು ಕವಿತೆಯನ್ನೇ ಬರೆದರು. ಅದೂ ಇಲ್ಲಿದೆ.]

ಎಲ್ಲರಿಗೂ ನಮಸ್ಕಾರ

ಬರಹಗಾರ್ತಿಯರ ಆತ್ಮೀಯವೂ ವಿಶಿಷ್ಟವೂ ಆದ ಈ ಕಾರ್ಯಾಗಾರವನ್ನು ಸಂಯೋಜಿಸಿ ಸಂಘಟಿಸಿ ಆತಿಥ್ಯ ನೀಡುತ್ತಿರುವ 'ನಮ್ಮ ಮಾನಸ', ಕುವೆಂಪು ಪ್ರತಿಷ್ಠಾನ, ಕುಪ್ಪಳಿ ಮತ್ತು ಕನ್ನಡ ಸಂಸ್ಕೃತಿ ಇಲಾಖೆ– ಇವರಿಗೆ ಮತ್ತು ಇದರ ಜೊತೆಗಿರುವ ಎಲ್ಲ ಹೋರಾಟಗಾರ್ತಿಯರಿಗೆ ಅಭಿನಂದನೆಗಳು. ಭಿನ್ನ ಭಿನ್ನ ಕ್ಷೇತ್ರಗಳು ಕೊಡುವ ಅನುಭವದ ಜ್ಞಾನವನ್ನು ಇಲ್ಲಿ ಬಂದಿರುವ ಸಹ ಹೋರಾಟಗಾರ್ತಿಯರಿಂದ ಪಡೆಯಲು ಉತ್ಸುಕಳಾಗಿ, ನನ್ನ ಕಾವ್ಯರಚನೆ ಮತ್ತು ಕಾವ್ಯಾಧ್ಯಯನದ ಕುರಿತ ಕೆಲವು ಆಲೋಚನೆಗಳನ್ನು ವಿನಯದಿಂದ ನಿಮ್ಮ ಮುಂದಿಡುತ್ತಿದ್ದೇನೆ. ಈ ಅವಕಾಶವನ್ನು ನನಗೆ ಒದಗಿಸಿಕೊಟ್ಟ ಎಲ್ಲರಿಗೂ ನನ್ನ ತುಂಬ ತುಂಬ ಪ್ರೀತಿ.

ಗೆಳತಿಯರೇ ನಾವು ಬದುಕಿದ್ದೇವೆ ಮತ್ತು ನಾವು ಬರೆಯುತ್ತಿದ್ದೇವೆ. ಜಗತ್ತಿನ ಒಂದು ದೊಡ್ಡ ಪ್ರಜಾಪ್ರಭುತ್ವದಲ್ಲಿ, ಅನೇಕ ಭಾಷೆಗಳಿಗೆ ಮಾನ್ಯತೆಯನ್ನು ಕೊಟ್ಟಿರುವ ರಾಷ್ಟ್ರದಲ್ಲಿ ನಾವು ಬದುಕುತ್ತಿದ್ದೇವೆ. ಆದರೂ ಇಲ್ಲಿ ಸೃಜನಶೀಲತೆ, ಸ್ವತಂತ್ರ ಚಿಂತನ, ಸೂಕ್ಷ್ಮವಾದ ಪ್ರಾದೇಶಿಕ ಸಂಸ್ಕೃತಿಗಳು ಮತ್ತು ಆ ಪ್ರಾದೇಶಿಕ ಸಂಸ್ಕೃತಿಯ ಕುರುಹಾದ ಅನೇಕ ಭಾಷೆಗಳು, ಬಹುದೊಡ್ಡ ಅಪಾಯಗಳನ್ನು ಎದುರಿಸುತ್ತಿವೆ. ಮುಕ್ತವೆಂದು ಕರೆಯಲಾದ ಆರ್ಥಿಕತೆ ಮತ್ತು ಬಳಸು, ಬಿಸಾಕು ಸಂಸ್ಕೃತಿಗಳಿಂದ ಬಹುದೊಡ್ಡ ಅಪಾಯಗಳನ್ನು ಪ್ರಾದೇಶಿಕ ಸಂಸ್ಕೃತಿ ಎದುರಿಸುತ್ತಿರುವ ಈ ಕಾಲದಲ್ಲೂ ನಾವು ಬರಹವನ್ನು ಪ್ರೀತಿಸುತ್ತ ಮಹಿಳೆಯ ಅನುಭವ ಮತ್ತು ಅಭಿವ್ಯಕ್ತಿಗಳ ಕುರಿತು ಆಲೋಚಿಸುತ್ತಿದ್ದೇವೆ ಮತ್ತು ಚರ್ಚಿಸುತ್ತಿದ್ದೇವೆ. ನಮ್ಮ ಆಲೋಚನೆ ಮತ್ತು ಚರ್ಚೆಗಳ ಮೂಲಕ ನಮ್ಮ ಅಭಿವ್ಯಕ್ತಿಯ ಮೇಲೆ ಆಗುತ್ತಿರುವ ಅತಿ ಸೂಕ್ಷ್ಮವಾದ ಆಕ್ರಮಣಗಳನ್ನು ಗುರುತಿಸಿ ಅದನ್ನು ಎದುರಿಸಲು ಗಟ್ಟಿಯಾಗಲು ಕಲಿಯುತ್ತಿದ್ದೇವೆ ಎಂಬುದು ಒಂದು ಸಮಾಧಾನದ ವಿಷಯ. ಹಾಗೆ ಇಂಥದೊಂದು ಕಾರ್ಯಾಗಾರ ಸಹ ಆ ನಿಟ್ಟಿನಲ್ಲಿ ಇಟ್ಟ ಮತ್ತೊಂದು ಹೆಜ್ಜೆ. ಈ ಕನಸುಗಳು ಈ ಸುಂದರ ಪರಿಸರದಲ್ಲಿ ಹರಳು ಗಟ್ಟುತ್ತಿರುವುದು ಸಹ ಒಂದು ಮಹತ್ವದ ವಿಷಯ.

ಇಂದು ಊಳಿಗಮಾನ್ಯ ಪದ್ಧತಿ ಮತ್ತು ಪಿತೃಪ್ರಧಾನ ಪದ್ಧತಿ ಎರಡೂ ಮೆಲ್ಲನೆ ಹಿಂದೆ ಸರಿದಿವೆ, ಆದರೆ ಸತ್ತಿಲ್ಲ. ಮೇಲುನೋಟಕ್ಕೆ ಈ ಜಗತ್ತಿನಲ್ಲಿ ಹೆಣ್ಣಿನ ಆಲೋಚನೆಗೆ ಬೆಲೆಯಿದೆ ಎಂಬಂತೆ ಕಾಣುತ್ತದೆ. ಆದರೆ ಈ ಎರಡೂ ಪದ್ಧತಿಗಳು ಮೂರನೆಯ ಜಾಗತೀಕರಣವೆಂಬ ಅತಿ ನಯಗಾರಿಕೆಯ ವ್ಯವಸ್ಥೆಯೊಡನೆ ಮಿಳಿತವಾಗಿವೆ. ಅದರ ಹಿಡಿತ ಒರಟಾಗಿಲ್ಲ. ಅತಿ ನಯವಾಗಿ ದೀರ್ಘವೂ ನಾಜೂಕೂ ಆದ ತನ್ನ ಹಸ್ತಗಳಿಂದ ಅದು ಸೃಜನಶೀಲತೆಯನ್ನು ತನ್ನ ಪಂಜದಲ್ಲಿ ಹಿಡಿದಿದೆ.

ಆಧುನಿಕ ಕನ್ನಡ ಮಹಿಳಾಕಾವ್ಯದ ನಾಲ್ಕನೆಯ ದಶಕವಿದು. ಈ ಅವಧಿಯಲ್ಲಿ ಮಹಿಳಾ ಕಾವ್ಯ ತನ್ನ ನೋವು ನಲಿವುಗಳನ್ನು ಸಾಹಿತ್ಯದಲ್ಲಿ ದಾಖಲು ಮಾಡಿದೆ. ಹಾಗೆ ಎಪ್ಪತ್ತರ ದಶಕದಲ್ಲಿ ಮಹಿಳೆಯರು ನೇರವಾಗಿ ಬರೆಯತೊಡಗಿದಾಗ ಪುರುಷಪ್ರಧಾನ ಸಮಾಜಕ್ಕೆ ಒಂದು ನೇರವಾದ ಹೊಡೆತ ಬಿದ್ದಿತು. ಮಹಿಳಾ ಬರಹಗಾರರು ಮತ್ತು ಕವಿಗಳು ಮುಖ್ಯಧಾರೆಯು ಗೌರವಿಸುವ ಸಾಂಪ್ರದಾಯಿಕ ಮೌಲ್ಯಗಳನ್ನು ಧಿಕ್ಕರಿಸಿದರು, ಪುರಾಣಗಳನ್ನು ಕ್ರಾಂತಿಕಾರಿ ಧೋರಣೆಯಿಂದ ಪುನಾರಚಿಸಿದರು. ಅಹಲ್ಯೆ ಸೀತೆ ಕುಂತಿ ಶಕುಂತಲೆಯರ ಕಥೆಗಳು ಹೊಸದಾಗಿ ಹೇಳಲ್ಪಟ್ಟವು. ದಿಟ್ಟವೂ ಪ್ರಾಮಾಣಿಕವೂ ಆದ ಮಹಿಳಾ ಅನುಭವಗಳ ಅಭಿವ್ಯಕ್ತಿ ಕಾವ್ಯದಲ್ಲಿ ಆಯಿತು. ಇಂದಿನವರೆಗೆ ಆ ಹೋರಾಟದ ಪ್ರಜ್ಞೆ ಮಹಿಳಾಕಾವ್ಯದಲ್ಲಿ ಇದೆ. ಹಗುರ ಅನುಕರಣೆಗಳು, ಜಾಳು ಜಾಳು 'ಕಾವ್ಯ' ಪರಂಪರೆಯ ಪ್ರಜ್ಞೆ ಮತ್ತು ಅಧ್ಯಯನದ ಅಭಾವ ಇಲ್ಲವೆಂದು ನಾನು ಹೇಳುತ್ತಿಲ್ಲ, "ತಮಂಧ ಘನ ಜ್ಯೋತಿ ಕಿರಿದು" ಎಂಬುದೇ ವಾಸ್ತವ ಸತ್ಯ. ಆದರೆ ಆ ಜ್ಯೋತಿಯ ಶಕ್ತಿ ಹಿರಿದು ಎಂಬುದು ಭಾವ ಸತ್ಯ.

ಸಮಾಜದ ಸ್ತ್ರೀಯ ಕುರಿತಾದ ಕೌಟುಂಬಿಕ ಸಾಮಾಜಿಕ ನಿರೀಕ್ಷೆಗಳಿಗೆ, ಪಾತಿವ್ರತ್ಯದ ಕಲ್ಪನೆಗೆ ಮಹಿಳಾ ಕಾವ್ಯ ತೀವ್ರವಾಗಿ ಪ್ರತಿಕ್ರಿಯಿಸಿದೆ, ಸಮಾಜದ ದ್ವಿಮುಖ ಮೌಲ್ಯಗಳನ್ನು ಪ್ರಶ್ನಿಸಿದೆ. ರೂಢಿ ಚಕ್ರ ಸುಲಲಿತವಾದ ಸಮಾಜದ ಸ್ಥಾಪಿತ ಮೌಲ್ಯಗಳಿಗಿಂತ ಭಿನ್ನವಾದ ಮೌಲ್ಯಗಳನ್ನು ಕಟ್ಟಿಕೊಟ್ಟಿದೆ.

ತಾಳ್ಮೆ, ಸೇವೆ, ಸಹನೆ, ಮಾತೃತ್ವ, ಪೊರೆಯುವಿಕೆಯ ಮೌಲ್ಯಗಳನ್ನು ಪುರುಷಪ್ರಧಾನ ಸಮಾಜ ಸ್ತ್ರೀಗೆ ಆರೋಪಿಸಿತು. ಹಾಗೇ ಆಳುವ ಗುಣವನ್ನು ಪುರುಷನಿಗೆ ಶೋಭೆಯೆಂದು ಬೆಳಸಿತು. ಎಪ್ಪತ್ತರ ದಶಕದಲ್ಲಿ ಮಹಿಳಾ ಕಾವ್ಯ ಈ ಆರೋಪಿತ ಮೌಲ್ಯಗಳನ್ನು ಧಿಕ್ಕರಿಸಿತು. ಹದಿಹರಯದ ಯೌವನದ ಭಾವನೆಗಳನ್ನು ಅಭಿವ್ಯಕ್ತಿಸಿತು. ಕುಟುಂಬ ವ್ಯವಸ್ಥೆಯಲ್ಲಿರುವ ಅಸಮಾನತೆಯ ವಿರುದ್ಧವೂ ಬಂಡೆದ್ದಿತು.

ಲಿಂಗ ಅಸಮಾನತೆಯ ಧೋರಣೆಗಳು, ಆ ಧೋರಣೆಯ ಸ್ಥಾಪಿತ ಮೌಲ್ಯಗಳ ವಿರುದ್ಧದ ಹೋರಾಟ 80 ಮತ್ತು 90ರ ದಶಕಗಳಲ್ಲೂ ಮುಂದುವರಿದಿದೆ. ಇದರೊಡನೆ ಧಿಕ್ಕಾರ ಆಕ್ರೋಶಗಳಿಗಿಂತ ಭಿನ್ನವಾದ ನವಿರುಹಾಸ್ಯ ಮತ್ತು ವಿಡಂಬನೆಯ ದಾರಿಯನ್ನು ಮಹಿಳಾಕಾವ್ಯ ಅನಂತರದ ದಶಕಗಳಲ್ಲಿ ಹಿಡಿದಿದೆ. ಪುರುಷನನ್ನು ಪ್ರತಿಸ್ಪರ್ಧಿಯೆಂದಾಗಲೀ ದಮನಶೀಲ ಸರ್ವಶಕ್ತನೆಂದಾಗಲೀ ಭಾವಿಸದೆ ಗೆಳೆಯನೆಂದು ಭಾವಿಸಿ ತಿದ್ದುವ ಯತ್ನವನ್ನು ಮಾಡಿದೆ.

ಸರಸ್ವತಿ ಚಿಮ್ಮಲಗಿ ತಮ್ಮ ಗತಿಸಿಹೋದ ಅಕ್ಕನಿಗೆ ಹೀಗೆ ಹೇಳುತ್ತಾರೆ. 'ಅಕ್ಕನ ಗಂಡ' ಎಂಬ ಕವನದಲ್ಲಿ,

ಭಾವ ಮೊದಲ ಸತ್ತಿದ್ದರ
ನೀ ರಂಡೆ ಅನಿಸಿಕೊಳ್ಳುತ್ತಿದ್ದೀ
ಈಗ ನೀ ಮೊದಲ ಸತ್ತದ್ದಕ್ಕ
ಮಾವನ ಮನಿ ಮಂಗಳ ಅಂಗಳ
ಆಗ್ಯಾದ ಅಕ್ಕ.

ಹೆಣ್ಣು ಭ್ರೂಣಹತ್ಯೆಯ ಬಗ್ಗೆ ಬಾನು ಮುಷ್ತಾಕ್ ಹೀಗೆ ಹೇಳುತ್ತಾರೆ:

ಬೆಳದಿಂಗಳ ಚೆಲ್ಲಾಡಬೇಕೆನಿಸಿ
ಚಂದ್ರ ಮುಗುಳ್ನಗೆ ಬೀರಿದ
ಒಡಲ ತುಂಬಿಸಿಕೊಳ್ಳಲು
ಭೂಮಿಯೇ ಇರಲಿಲ್ಲ.

"ಉರಿವ ಒಲೆಗಳ ಮುಂದೆ" ಬೇಯುವ ಆರ್. ನಿರ್ಮಲ ದ್ರೌಪದಿಯನ್ನು "ನಿನ್ನ ಅಕ್ಷಯ ಪಾತ್ರೆಯನ್ನು ಸ್ವಲ್ಪ ದಿನ ಕೊಡುತ್ತೀಯ?" ಎಂದು ದಿನನಿತ್ಯದಡಿಗೆಯ ಜಂಜಾಟ ಸಾಕಾಗಿ ಕೇಳುತ್ತಾರೆ.

ಅಡುಗೆ ಮನೆಯಲ್ಲಿ ಕೆಲಸ ಕಾರ್ಯಗಳಲ್ಲಿ ನೆರವಾಗಿ "ನೀನು Lucky" ಎನ್ನುವ ಪುರುಷರನ್ನು ಛೇಡಿಸುತ್ತಾರೆ ಕವಿತಾ ರೈ,

ಇಂದು ಇವರು ಹೇಳುತ್ತಾರೆ
ನಾನು ನಿನ್ನ ಜೊತೆಗೆ ಇದ್ದೇನೆ
ಅಡುಗೆ ಮನೆಯಲ್ಲಿ ನಿನ್ನ ಸೆರಗುಹಿಡಿದಿಲ್ಲ
ಕೈಗೆ ಕಾಲಿಗೆ ಬೇಕು ಬೇಕಾದ್ದು ಇದೆಯಲ್ಲ
ಕೆಲಸಕ್ಕೆ ಜೊತೆ ಸೇರಿದ್ದೇನೆ ಸುಖಿ ನೀನು
ನಮ್ಮಜ್ಜ ನಿಮ್ಮಜ್ಜ ಅಮ್ಮಂದಿರಿಗಿಂತ
ಒಳಗೆ ಕುಕ್ಕರು ಕೂಗುತ್ತಿವೆ ಒತ್ತಡದಿಂದ
ಒಲೆ ಬದಲಾದರೇನು ಉರಿ ಬದಲಾಗಿದೆಯೇ
-(ಕವಿತಾ ರೈ-ಹಕ್ಕಿಹರಿವ ನೀರು)

ಸ್ಥಾಪಿತ ಮೌಲ್ಯಗಳನ್ನು ಧಿಕ್ಕರಿಸುವ ಹೆಣ್ಣಿನ ಪ್ರತಿಭಟನೆ ಉಗ್ರವಾದಾಗ ವ್ಯವಸ್ಥೆ ಇನ್ನೊಂದು ಹುನ್ನಾರವನ್ನು ಮಾಡುತ್ತದೆ ಸಂತಾನದ ರೂಪವನ್ನೋ ಪ್ರಿಯಕರನ ರೂಪವನ್ನೋ ತಾಳಿ ಕುಟುಂಬ ವ್ಯವಸ್ಥೆಯ ಮೌಲ್ಯಗಳನ್ನು ರಕ್ಷಿಸಿ ಹೆಣ್ಣಿನ ಪ್ರತಿಭಟನೆಯ ಶಕ್ತಿಯನ್ನು ಹೀರಿಬಿಡುತ್ತದೆ. ಇಂಥದೊಂದು ಚಿತ್ರ ಪ್ರತಿಭಾ ನಂದಕುಮಾರರ "ಕ್ಷೇತ್ರಪಾಲ ಸಮರ್ಚಿತಾ" ಎಂಬ ಕವಿತೆಯಲ್ಲಿದೆ. ದೇವಿಯು ಉಗ್ರರೂಪ ತಾಳಿ ದಾರುಕನೆಂಬ ದೈತ್ಯನನ್ನು ಸಂಹರಿಸಿದ ಮೇಲೆ ದೇವಿಯ ಕೋಪ ಶಮನವಾಗದೇ ಇರಲು ಶಿವನು ಮಗುವಿನ ರೂಪತಾಳಿ ಅತ್ತನಂತೆ. ದೇವಿ ಸ್ತನ್ಯಪಾನ ಮಾಡಿಸಲು, ಶಿವನು ಹಾಲು ಕುಡಿಯುವಾಗ ಅವಳ ಕ್ರೋಧಾಗ್ನಿಯನ್ನೂ ಹೀರಿದನಂತೆ. ಸಲ್ಲದು ಕೋಪ, ಹೆಣ್ಣಲ್ಲವೇ ಶಾಂತಳಾಗು ಪ್ರಸನ್ನಳಾಗು ಎಂದು ಸ್ತುತಿಸಿ ಕೋಪವನ್ನು ಶಾಂತಗೊಳಿಸಿ ಬಿಡುತ್ತದೆ ವ್ಯವಸ್ಥೆ.

ಶಿಶುರೂಪಿ ದೈವ ಮುದ್ದು ತುಟಿಗಳಿಂದ ಹೀರಿ ಹಾಗಾಗಿ
ಮತ್ತೆ ಪ್ರತಿಷ್ಠಾಪಿಸುತ್ತದೆ ಪೀಠದಲ್ಲಿ
ಸೌಮ್ಯಳಾಗಿರು ಬಲಿ ಕೇಳದಂತೆ
ದೈತ್ಯನೆದುರಾದಾಗ ಮಾತ್ರ
ನಾವೇ ಎಬ್ಬಿಸುತ್ತೇವೆ

ಎಂದು ಗೇಲಿ ಮಾಡುತ್ತಾರೆ ಪ್ರತಿಭಾ.

ಧ್ಯಾನ ಅಧ್ಯಯನ ಬರಹಗಳಿಗೆ ಕವಯಿತ್ರಿ-ಬಹುದೂರ ಹೋಗಿ ಗುಹೆ ಗಹ್ವರಗಳಲ್ಲಿ ತಪಸ್ಸು ಮಾಡಬೇಕಿಲ್ಲ-ಅವಳ ಮಹಾಪ್ರಸ್ಥಾನ ಮನೆಯೊಳಗೇ ನಡೆಯುವುದು,

ಕೊನೆಗೂ ದಕ್ಕಿತು ನನಗೊಂದು ಕೋಣೆ
ಅಲ್ಲದೆ ಒಂದು ಊಟದ ಟೇಬಲ್ಲು
ಎಲ್ಲರಿಗೂ ಪ್ರವೇಶ ನಿಷಿದ್ಧ
ನನಗೆ ಆ ಕೋಣೆ ಪ್ರಶಸ್ತ
(ಕೆ. ಷರೀಫಾ 'ಮುಮ್ತಾಜಳ' ಮಹಲು)

ಇಂದು ಮಹಿಳೆ ಬೇರೆ ಬೇರೆ ರಂಗಗಳಲ್ಲಿ ಸಾಧನೆ ಮಾಡಿ ತನ್ನ ಅಸ್ಮಿತೆಯನ್ನು ದಾಖಲು ಮಾಡಿರುವುದರ ಪರಿಣಾಮ ಪುರುಷ ಜಗತ್ತಿನ ಮೇಲೂ ಆಗಿದೆ. ಸೂಕ್ಷ್ಮ ಪುರುಷನ ಪ್ರೀತಿಯನ್ನು ಅವಳು ಗುರುತಿಸುತ್ತಾಳೆ. ಕನ್ನಡ ಕವಯಿತ್ರಿಯರು ಅಪ್ಪನ ಬಗ್ಗೆ ಬರೆಯುವ ಪದ್ಯಗಳಲ್ಲಿ ಇದನ್ನು ಕಾಣಬಹುದು. ಎಂ.ಎಸ್. ವೇದ ಚಿತ್ರಿಸುವ ಅಪ್ಪ

"ಹೋಂಡಾದ ಹುಡುಗ ಕಣ್ಣು ಚಿವುಟಿದ್ದು
ಕಡೆಗೆ ಮುಟ್ಟಿನ ಹೊಟ್ಟೆನೋವು"
ಎಲ್ಲವನ್ನು ಹಂಚಿಕೊಳ್ಳಬಲ್ಲ ಅಪ್ಪ

ಹೀಗೆ ಮಹಿಳಾ ಕಾವ್ಯ ವೈಯಕ್ತಿಕತೆಯನ್ನು ಕುರಿತು ಹಾಡುತ್ತಲೇ ಸಮಾಜಮುಖಿಯಾಗಿದೆ. ಅವಳು ಅಡುಗೆ ಮನೆಯ ಹುಡುಗಿಯೂ ಹೌದು, 'ನೋಡಬಾರದು ಚೀಲದೊಳಗನು' ಎಂದು ಅಧಿಕಪ್ರಸಂಗಿ ಪುರುಷರನ್ನು ಎಚ್ಚರಿಸುವ ಏಕಾಂತ ಪ್ರಿಯೆಯೂ ಹೌದು. ಅವಳ ಗಾಜುಗೋಳದಲ್ಲಿಯೂ ಬುದ್ಧ ಬೆಳಕು ಇದೆ. ಅವಳದಾದ ಕೋಣೆ ಅವಳ ಅಡಿಗೆ ಮನೆಯಲ್ಲೇ ಇದೆ. ಅವಳು ಉರಿಯ ಚಪ್ಪರದಲ್ಲಿ ಅರಳಿದ ಹಿಮದ ಪದ್ಮ. ಅವಳು ಹೆದ್ದಾರಿ ಬದಿಯ ಹುಡುಗಿ, ಚಂದ್ರನನ್ನು ಭೂಮಿಗೆ ಕರೆವ ಹೊಳೆ ಮಗಳು ಬಿಳಿಯ ಕೋಟಿನ ಕವಚ, ಸ್ಟೆತಾಸ್ಕೋಪಿನ ಹಾರ ಹಾಕಿಕೊಂಡು ಜೀವಗಳನುಳಿಸಲು ಹಡಗಿನಂಥ ಕಾರಿನಲಿ ತೇಲಿಹೋಗುವ ವೈಯಾರಿ.

ಅವಳಿಗೆಲ್ಲ ತಿಳಿಯುತ್ತದೆ ಈ ಜಗತ್ತಿನ ನಯವಂಚಕತೆ, ಅವಳು ಸ್ವಯಂ ತೇಜದ ರೇವತಿ, ಸ್ವಂತದ ಕುದುರೆ ಹತ್ತಿ ಹಾರುವವಳು. ಕವಿತೆ ಬರೆಯುವ ಹುಡುಗಿಯ ಹೊಸ ತಲೆಮಾರು ಕೂಡ ಹುಟ್ಟಿದೆ. ಅವರು ಜಗತ್ತಿನ ಕಟ್ಟು ಕಟ್ಟಳೆಗಳು ಅಲ್ಲಿರಲಿ ಎಂದು ಬಿಂದಾಸಾಗಿ ಬರೆಯುತ್ತಾರೆ.

ಅರಬಿ ಕಡಲನ್ನು ತನ್ನದೇ ಅಳತೆಗೋಲಿನಲ್ಲಿ ಅಳೆಯುವ ಹಾ.ಮ. ಕನಕ - ಹಸಿರುವಿದ್ಯೆ ಹುಡುಗನ ಬಗ್ಗೆ, ಅಂಬಿಗರ ಹುಡುಗನ ಬಗ್ಗೆ ಬರೆಯುತ್ತಾರೆ.

ತಾರಿಣಿ ಶುಭದಾಯಿನಿ

ಮೃದ್ವಂಗಿ ಮಿದುವಾಗಿ
ಜೀವ ಚಿಪ್ಪಿನೊಳು
ಪಿತಿಪಿತಿ ಎಂದಾಗಿ
ಸೂಜಿಮೊನೆಯ ನೇಯ್ದು
ಚುಚ್ಚುವ ಪಾತರವಾಗಿ
ಮೈಕ್ರೋಸ್ಕೋಪಿನಡಿಯಲ್ಲಿ
ಬಿಡಿಸಿ ನೋಡುವರಾಗಿ

ಎಂದು ವಿಜ್ಞಾನ ತಂತ್ರಜ್ಞಾನಗಳು ಅಮಾನವೀಯವಾಗಿರುವುದನ್ನು ಟೀಕಿಸುತ್ತಾರೆ.

ರೆಕ್ಕೆ ಬಿಚ್ಚಿ ಆಕಾಶ ನೆಚ್ಚಿದ ಅಕ್ಷತಾ:

ಬಿರಿದರೆ ಭೂಮಿ ಬಿರಿಯಲಿ
ಎಂದು ನಿಶ್ಚಯಿಸಿದ ನೀವೆ
ದಣಪೆ ದಾಟುವ ಹಂಬಲ
ತೋರದೆ ಹೋದಿರಿ
....
....
ಹಾಗೊಮ್ಮೆ ಭೂಮಿ ಬಿರಿದರೂ
ಅಲ್ಲಿಯೇ ಅದೆಷ್ಟೋ ಕಾಲದಿಂದ ಇದ್ದಾಳಲ್ಲ

ಜಾನಕಿ ಕಾಯುತ್ತಾಳೆ ಎಂದಲ್ಲ
ದಾಟಿದ ನಂತರದ ಬದುಕ ಕಲಿಸುತ್ತಾಳೆ.

ಎಂದು "ದಣಪೆ" ದಾಟುವ ಹಂಬಲ ತೋರದ ಜನಗಳನ್ನು ಟೀಕಿಸುತ್ತ ಎಚ್ಚರಿಸುತ್ತ, ಸಮಾಧಾನಿಸುತ್ತಾರೆ.

ಕವಿತೆಯೆಂಬುದೊಂದು ನೀರಹನಿ, ಸದಾ ಚಲನಶೀಲವಾದದ್ದು. ವಿಮರ್ಶಕರು ಲಾಕ್ಷಣಿಕರು ಕವಿತೆಯ ನಿಯಮಗಳನ್ನು ಗುರುತಿಸಿದ್ದಾರೆ. ಕವಿ ಇಂಥದನ್ನು ಕುರಿತು ಹಾಡಬಹುದೆಂದು, ಹಾಡಬಾರದೆಂದು ಹೇಳುತ್ತಾರೆ. ಕವಿತೆ ಆ ಯಾವ ನಿಯಮಗಳನ್ನೂ ಕೇಳದು. ಅದು ಉರುಳುರುಳಿ ಹೋಗುತ್ತದೆ ಗೋಲಾಕಾರೆಯಾಗಿ. ನೀರ ಹನಿಯೇ ಜಗತ್ತನ್ನು ಹಿಡಿವ ಕನ್ನಡಿಯಾಗಿ, ಕನ್ನಡಿಯೊಳಗಿನ ಹುಡುಗಿ ಸ್ವಯಂ ಪ್ರಭೆ ಹೇಳುತ್ತಾಳೆ.

"ನನ್ನಷ್ಟಕ್ಕೆ ನನ್ನ ಬಿಟ್ಟರೆ
ನಾನು ನದಿಯಾಗಿ ಹರಿಯಬಲ್ಲೆ
ಯಾರೂ ಅದಕ್ಕೆ ಸೇತುವೆ ಕಟ್ಟಿ ದಾಟಬೇಕಾಗಿಲ್ಲ"

ಬೆಳಗೆರೆ ಜಾನಕಮ್ಮನವರ ಕಾಲದಿಂದ ಇಂದಿನ ಸ್ವಯಂ ಪ್ರಭೆಯವರೆಗೂ ಮಹಿಳಾ ಕಾವ್ಯ ಹರಿದಿದೆ.

ಗಿಡವೆಂದು ಬಗೆದೆಯೋ
ಹೆಣ್ಣು ಜನ್ಮದ ಒಡಲ
ಫಲಗಳನು ಮನಬಂದಂತೆ
ಸೃಜಿಸುವುದಕೆ

ಎಂದು ಆ ಕಾಲದಲ್ಲಿ ಕೇಳಿದ ಅವರ ದನಿ ಇಂದೂ ಅನುರಣಿಸುತ್ತಲೇ ಇದೆ. ಮಹಿಳಾಕಾವ್ಯವು ವರದಕ್ಷಿಣೆ ಸಾವಿನಿಂದ ಹಿಡಿದು ಗೋಧ್ರಾದವರೆಗೆ, ನದಿ ತೊರೆ ಬೆಟ್ಟ ಹೂ ಗಿಡಗಳಿಂದ ಹಿಡಿದು ಅಂತಾರಾಷ್ಟ್ರೀಯ ಕ್ರೀಡೆಗಳವರೆಗೆ ಒಲಿದಂತೆ ಹಾಡಿದೆ.

ಇಂದು ಮಹಿಳಾಕಾವ್ಯ ಜಾಗತೀಕರಣದ ಹಲವು ಹುನ್ನಾರಗಳ ವಿರುದ್ಧ ಸಹ ದನಿಯೆತ್ತಿದೆ.


'ನೂರು ಗೋರಿಯ ದೀಪ'ದ ಡಾ॥ ವಿನಯಾ ಹೇಳುತ್ತಾರೆ

ಅಮೆರಿಕಾಕ್ಕೆ ಮನುಷ್ಯರಕ್ತದ ನಿರ್ಮಾಣ ಬೇಕಿದೆ
ಅದು ಅಲ್ಲಲ್ಲಿ ರಕ್ತಚೆಲ್ಲಿಸಿ
ರಕ್ತದ ಗುಣ ತಿಳಿಯಲು ಆದೇಶಿಸಿದೆ
ದೊಡ್ಡ ಸತ್ಯವೊಂದರ ಶೋಧಕ್ಕೆ
ಸತ್ತ ಪ್ರಾಣಿಗಳು ಕಸದ ತೊಟ್ಟಿ ಸೇರುತ್ತವೆ
ಅಮೆರಿಕಾ ದಯೆತೋರಿ
ಸಮಾಧಿ ಕಟ್ಟಿಸುತ್ತದೆ.

ಬರೆಯುತ್ತ ಹೋದಂತೆ ಈ ಪುಟ್ಟ ಲೇಖನ ಮಹಿಳಾಕಾವ್ಯಕ್ಕೆ ನ್ಯಾಯ ಒದಗಿಸಲಾರದು ಅಂತ ನನಗೇ ಅನ್ನಿಸುತ್ತಿದೆ. ಅಷ್ಟು ಬೆಳೆದಿದೆ ಕಾವ್ಯ, ವೈವಿಧ್ಯದಲ್ಲಿ ಸಂಖ್ಯೆಯಲ್ಲಿ. ಜೋಳ ಮುಗಿದರೂ ಹಾಡು ಉಳಿಯುತ್ತದೆ. ❑

ಗಾರ್ಮೆಂಟ್ ಹುಡುಗಿ ಹೊಲಿದ ಚೆಂದದ ಪೋಷಾಕು

• ಡಾ. ಸವಿತಾ ಬನ್ನಾಡಿ



ಬಟ್ಟೆಯ ಕತ್ತರಿಸುವ ಕತ್ತರಿ
ಅವಳ ಕನಸುಗಳನ್ನು ಕತ್ತರಿಸುತ್ತದೆ
ಜೋಡಿಸಿ ಹೊಲಿವ ಕೈಗಳು
ಮತ್ತೊಂದು ಕನಸನ್ನು ಹೊಲಿಯುತ್ತವೆ

ಮೇಲ್ವಿಚಾರಕನ ಸೂಜಿಕಣ್ಣು
ಅವಳು ಕತ್ತೆತ್ತದಂತೆ ಚುಚ್ಚುತ್ತದೆ
ಅರೆಹೊಟ್ಟೆಯ ನಿಶ್ಶಕ್ತ ಕಾಲು
ಸೆಟೆದು ಕೊಳ್ಳದಂತೆ
ವೇಗವಾಗಿ ತುಳಿಯುತ್ತದೆ

ಒತ್ತರಿಸಿ ಬರುವ ಬಾಯಾರಿಕೆಯ
ದಾವಾನಲಕ್ಕೆ ಜಿಪ್‌ಹಾಕಿ ಮುಚ್ಚುತಾಳೆ
ಜಲಬಾಧೆ ತೀರಿಸಿಕೊಳ್ಳಲು
ಇರುವುದು ಒಂದೇ ಬಾರಿಯ
ಒಪ್ಪಿಗೆಯ ಪತ್ರ
ನೀರೆಲ್ಲ ನಿರಿಗೆಯಾಗಿ
ಪೋಷಾಕು ಸಿಂಗಾರಗೊಳ್ಳುತ್ತದೆ

ಎಳೆ ಹಸುಳೆಯ ತಾಯಂದಿರು
ಹಾಲುಣಿಸಲು ಸಮಯ ಹಾಳುಮಾಡುವಂತಿಲ್ಲ
ಹಾಲುಣಿಸಲು ಎದ್ದರೆ ಮತ್ತೆ
ನಾಳೆ ಗೇಟ್ ತೆರೆಯುವುದಿಲ್ಲ
ಸೋರಿ ಹೋದ ಎದೆ ಹಾಲೆಲ್ಲ
ಬೆಳ್ಳನೆ ಲೇಸ್‌ಗಳಾಗಿ
ಕತ್ತಸುತ್ತ ಚೆಲುವ ಬಲೆಯಾಗಿಸುತ್ತಾಳೆ

ದಿನದ ಟಾರ್ಗೆಟ್ ಮುಗಿಸಿ
ನಿಟ್ಟುಸಿರಿಡಲು ಕಾತರಿಸುತ್ತಾಳೆ
ಹದ್ದಿನ ಕಣ್ಣಿನ ಮೇಲ್ವಿಚಾರಕ
ಎಲ್ಲಿ ಮುಟ್ಟಿದರೂ ತುಟಿ
ಪಿಟಕ್ಕೆನ್ನದೆ ಸಹಿಸಿಕೊಳ್ಳುವ
ನೆನಪಿಗೆ ನಿಮಿರಿದ ಮೈಮುಳ್ಳುಗಳನ್ನು
ದುಂಡಗಾಗಿಸಿ ಬಟನ್
ಗಳನ್ನು ಪೋಣಿಸುತ್ತಾಳೆ

ಹೃದಯ ಮೊಂಬತ್ತಿಯಾಗಿ ಉರಿಯುತ್ತಿದೆ
ಕಪ್ಪು ಮಸಿಯ ಮೇಲೆ ರಕ್ತಗೆಂಪಿನ
ಚಿತ್ತಾರದ ಅಂಗಿ ರಫ್ತಿನ ಪೆಟ್ಟಿಗೆಯಲ್ಲಿ
ಪ್ಯಾಕ್ ಆಗಿ ಗಡಿದಾಟಿದೆ

ಮನೆಗೆ ತೆರಳುವ ಹಾದಿಯಲ್ಲಿ ಅತ್ತು
ಕಪ್ಪಾದ ಆಗಸದ ಬಟ್ಟೆ ಹರಿದು
ಚುಕ್ಕಿಯಂತೆ ಚೂರಾಗಿದೆ
ನಾಳೆ ಮತ್ತೆ ಅವುಗಳನೆಲ್ಲಾ ಹೊಲಿದು
ಒಗೆದು ನೀಲಿ ಹಾಕಿ ಒಣಹಾಕಲು
ಅವಳು ತಯಾರಿ ನಡೆಸುತ್ತಾಳೆ.

ಬಟ್ಟೆಯ ಕತ್ತರಿಸುವ ಕತ್ತರಿ
ಅವಳ ಕನಸುಗಳನ್ನು ಕತ್ತರಿಸುತ್ತವೆ
ಜೋಡಿಸಿ ಹೊಲಿವ ಕೈಗಳು
ಮತ್ತೊಂದು ಕನಸನ್ನು ಹೊಲಿಯುತ್ತವೆ ❑

ಕರ್ನಾಟಕ - ಉತ್ಕೃಷ್ಟ ಕಲೆ, ಸಾಹಿತ್ಯ, ಸಂಸ್ಕೃತಿ....ಗಳ ಬೀಡು

ಸಾವಿರಾರು ವರ್ಷಗಳ ಶ್ರೇಷ್ಠ ಸಂಸ್ಕೃತಿ, ಶ್ರೀಮಂತ ಕಲೆ, ಅನುಪಮ ಸಾಹಿತ್ಯ ಭಂಡಾರ ಹೊಂದಿರುವ ಕರ್ನಾಟಕದ ವೈಭವವನ್ನು ದೇಶದ ಉದ್ದಗಲಕ್ಕೂ ಮೆರೆಸಿದ ಹಿರಿಮೆ ಕನ್ನಡಿಗರದು. ಸಾಮಾಜಿಕ ಸಮಾನತೆ, ಹೃದಯ ವೈಶಾಲ್ಯತೆಯ ಮೂಲ ಸೆಲೆಯಲ್ಲಿ ಮೂಡಿಬಂದ ಈ ನಾಡಿನ ವಚನಸಾಹಿತ್ಯ ಮತ್ತು ದಾಸಸಾಹಿತ್ಯಗಳು ಸದಾ ಪ್ರಸ್ತುತ. ಅವು ಮನುಕುಲಕ್ಕೆ ನೀಡಿದ ಅಭೂತಪೂರ್ವ ಕೊಡುಗೆಗಳು.

ದೇಶದ ಕಲೆ, ಸಾಹಿತ್ಯ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನಗಳಂತಹ ಮಹತ್ತರ ರಂಗಗಳಲ್ಲಿ ಮಹೋನ್ನತ ಕಾಣಿಕೆ ನೀಡಿದ ಕರ್ನಾಟಕವನ್ನು ಮತ್ತಷ್ಟು ಸಮೃದ್ಧಗೊಳಿಸಬೇಕೆಂಬುದೇ ಸರ್ಕಾರದ ದೃಢ ಸಂಕಲ್ಪ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಒತ್ತು ನೀಡಿರುವ ಸರ್ಕಾರ ಉತ್ತರ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಿ ಕಾರ್ಯಪ್ರವೃತ್ತವಾಗಿದೆ.

ಕರ್ನಾಟಕ ವಾರ್ತೆ

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at Chamarajpet Post Office

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018